# ಶ್ರೀ ಕೃಷ್ಣ ವ್ರತ

## ಸಾಕ್ಷಾತ್ ಶ್ರೀ ಕೃಷ್ಣ ಭಗವಂತನಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ



ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ



ಓಂ ದೇವಕೀನಂದನಾಯ ವಿದ್ಮಹೇ |

ವಾಸುದೇವಾಯ ಧೀಮಹಿ |

ತನ್ನೋ ಕೃಷ್ಣ ಪ್ರಚೋದಯಾತ್ ||

ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು

# ಶ್ರೀ ಕೃಷ್ಣ ವ್ರತ

**ಸಾಕ್ಷಾತ್ ಶ್ರೀ ಕೃಷ್ಣ ಭಗವಂತನಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**




**ವಿಶ್ವಪತಿ**

**(ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ)**



**SHRI DESIGNS**

**VEDIC LOGO DESIGNERS**

**www.lordofsevenhills.com**

**Cell : + 91 9849443752**

**Hyderabad**

**2021**

# ಶ್ರೀ ಕೃಷ್ಣ ವ್ರತ

**ಸಾಕ್ಷಾತ್ ಶ್ರೀ ಕೃಷ್ಣ ಭಗವಂತನಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

© ಸರ್ವಹಕ್ಕುಗಳು ರಚಯಿತನದು

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿಯವರು ರಚಿಸಿದ ಆಧ್ಯಾತ್ಮಿಕ ಪುಸ್ತಕಗಳನ್ನು ಈ ವೆಬ್ಸೈಟಿನಿಂದ ಉಚಿತವಾಗಿ ಪ್ರಿಂಟ್ ಮಾಡಿಕೊಳ್ಳಬಹುದು**

**www.lordofsevenhills.com**

**T.V.R.K. MURTHY,** M.Tech

**Flat No.903, F-Block, Vertex Sadguru Krupa Apartments**

**Beside Sanghamitra School, Nizampet Road,**

**HYDERABAD – 500 085, India**

**Cell : + 91 9849443752**

**Email : viswapathi@yahoo.com, shridesigns@gmail.com**

# ಮುನ್ನುಡಿ

**ವಸುದೇವಸುತಂ ದೇವಂ ಕಂಸಚಾಣೂರ ಮರ್ದನಂ |**
**ದೇವಕೀ ಪರಮಾನಂದಂ ಕೃಷ್ಣಮ್ ವಂದೇ ಜಗದ್ಗುರುಮ್ ||**

ಶ್ರೀ ಕೃಷ್ಣನು ಪರಮದಯಾಸ್ವರೂಪನು. ತನ್ನ ಭಕ್ತರೆಂದರೆ ಶ್ರೀ ಕೃಷ್ಣನಿಗೆ ಬಹಳ ಪ್ರೀತಿ ಮತ್ತು ಅನುರಾಗ. ಯಾವಾಗಲೂ ತನ್ನನ್ನೇ ಸ್ಮರಿಸುತ್ತಿರುವ ಭಕ್ತರನ್ನು ನಿತ್ಯ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುತ್ತಾನೆ. ಒಂದು ಸಾರಿ ಗಟ್ಟಿಯಾಗಿ ಶ್ರೀ ಕೃಷ್ಣಾ! ಗೋಪಾಲಾ! ಗೋಕುಲಾನಂದನಾ! ಎಂದು ನಿಷ್ಕಳಂಕ ಭಕ್ತಿಯಿಂದ ಕರೆದರೆ ಸಾಕು, ತಕ್ಷಣ ಬಂದು ಆ ಭಕ್ತನನ್ನು ಅಪ್ಪಿಕೊಳ್ಳುತ್ತಾನೆ. ಎಂಥಹ ಆಪತ್ತಿನಲ್ಲಿದ್ದರೂ ಕ್ಷಣದಲ್ಲಿ ಪ್ರತ್ಯಕ್ಷನಾಗಿ ರಕ್ಷಿಸುತ್ತಾನೆ.

ಅಂತಹ ಅಮೃತಪ್ರೇಮಮೂರ್ತಿಯಾದ ಶ್ರೀ ಕೃಷ್ಣ ಭಗವಂತನು, ಒಂದು ದಿನ ಕನಸ್ಸಿನಲ್ಲಿ ಪ್ರತ್ಯಕ್ಷನಾಗಿ ಕಲಿಯುಗದಲ್ಲಿ ತನ್ನ ಭಕ್ತರೆಲ್ಲರನ್ನು ಅನುಗ್ರಹಿಸಲು ಒಂದು ಒಳ್ಳೆಯ ಸುಲಭದ ವ್ರತವಿಧಾನವನ್ನು ಉಪದೇಶಿಸಿದರು. ಇದೆಲ್ಲಾ ಎಷ್ಟೋ ಜನ್ಮಗಳ ಪುಣ್ಯಫಲವೆಂದು ಭಾವಿಸುತ್ತೇನೆ. ಕೂಡಲೇ ವ್ರತ ಕಥೆಗಳನ್ನು ಬರೆಯಲು ಪ್ರಾರಂಭಿಸಿದೆನು. ಎರಡು ಕಥೆಗಳನ್ನು ಬರೆಯುವಾಗಲೇ ಕೆಲವು ಅಡೆತಡೆಗಳು ಬಂದು ಕಥೆಗಳನ್ನು ಮುಂದುವರಿಸಲಾಗಲಿಲ್ಲ. ಒಂದು ದಿನ ಸಾಯಂಕಾಲ, ಏನೋ ಆಲೋಚಿಸುತ್ತಾ ಕುಳಿತುಕೊಂಡಿರುವಾಗ ಕೈಯಲ್ಲಿ ಕೊಳಲು ಹಿಡಿದುಕೊಂಡು ಬಾಲಕೃಷ್ಣನು ನನ್ನ ಸುತ್ತಲೂ ವೇಗವಾಗಿ ಓಡಾಡತೊಡಗಿದನು. ಈ ವ್ರತವನ್ನು ಯಾವಾಗ ಪೂರ್ತಿ ಮಾಡುತ್ತೀ? ಎಂದು ಕೇಳಿದನು. ನನ್ನ ಸಂತೋಷಕ್ಕೆ ಪಾರವೇ ಇಲ್ಲ. ಕೂಡಲೇ ಐದು ಕಥೆಗಳನ್ನು ಪೂರ್ತಿ ಮಾಡಿದೆನು.

ಹೀಗಿರುವಾಗ, ದೈನಂದಿನ ಜೀವನದ ಕೆಲಸದ ಒತ್ತಡದಲ್ಲಿ ಪುಸ್ತಕ ಮುದ್ರಣದ ಕೆಲಸದಲ್ಲಿ ಆಲಸ್ಯ ಮಾಡಿದೆನು. ಒಂದು ದಿನ ಪುಸ್ತಕದ ಮುದ್ರಣ ಪ್ರಾರಂಭಿಸುವಾ ಎಂದು ಆಲೋಚಿಸಿದರೇ ನಾನು ಬರೆದ ವ್ರತದ ಕಡತ ಮಾಯವಾಗಿತ್ತು. ಎಷ್ಟು ಹುಡುಕಿದರೂ ಸಿಗಲಿಲ್ಲ. ನಾನು ಉದಾಸೀನ ಮಾಡಿದೆನು ಎಂದು ಆ ಬಾಲಕೃಷ್ಣನು ಮನೆಯಿಂದ ಹೊರಗೆ ಓಡಿದನು ಎಂದು ನನಗೆ ಅರ್ಥವಾಯಿತು. ಇಷ್ಟರವರೆಗೆ 25 ಪುಸ್ತಕಗಳನ್ನು ಬರೆದೆನು. ಎಂದೂ ಈ ವಿಧವಾಗಿ ವ್ರತ ಪ್ರತಿಗಳನ್ನು ಕಳೆದುಕೊಳ್ಳಲಿಲ್ಲ. ಹೀಗೆ ಜರುಗಿದ್ದಕ್ಕೆ ನಾನು, ನನ್ನ ಧರ್ಮಪತ್ನಿ ರುಕ್ಮಿಣಿ, ನಾವಿಬ್ಬರೂ ತುಂಬಾ ಬೇಸರಪಟ್ಟೆವು.

ನಾನು, ರುಕ್ಮಿಣಿ - ಆ ಶ್ರೀ ಕೃಷ್ಣ ಭಗವಂತನನ್ನು, ನಮ್ಮ ತಪ್ಪುಗಳನ್ನು ಕ್ಷಮಿಸು ಎಂದು ಎಷ್ಟೋ ವಿಧಾನದಿಂದ ಬೇಡಿಕೊಂಡೆವು. ಶ್ರೀ ಕೃಷ್ಣ... ವ್ರತವನ್ನು ಪುನಃ ಅನುಗ್ರಹಿಸು ಎಂದು ಪ್ರಾರ್ಥಿಸಿದೆವು. ಭಕ್ತವತ್ಸಲನಾದ ಶ್ರೀ ಕೃಷ್ಣನು ಅನುಗ್ರಹಿಸಿದನು. ಎರಡು ದಿನದಲ್ಲಿ ಶ್ರೀ ಕೃಷ್ಣ ವ್ರತವು ಆ ಗೋಕುಲಾನಂದನನ ಅನುಗ್ರಹದಿಂದ ಒಂದು ಪ್ರವಾಹದಂತೆ ಹರಿದು ಬಂತು. ಈಸಲ, ಆ ಶ್ರೀ ಕೃಷ್ಣ ಸ್ವಪ್ನದಲ್ಲಿ ದರ್ಶನಕೊಟ್ಟು ನಮಿಬ್ಬರನ್ನು ಎದುರಲ್ಲಿ ಕುಳ್ಳಿರಿಸಿ ಈ ವ್ರತಕಥೆಗಳನ್ನು ಉಪದೇಶಿಸಿದನು. ಆ ಶ್ರೀ ಕೃಷ್ಣನ ಅನುಗ್ರಹವು ತಿರುಗಿ ಸಿಕ್ಕಿದ್ದಕ್ಕೆ ನಾವಿಬ್ಬರೂ ತುಂಬಾ ಸಂತೋಷಪಟ್ಟೆವು.

ಶ್ರೀ ಕೃಷ್ಣನು ಪರಮದಯಾಸ್ವರೂಪನು. ಆ ದೇವರ ಅನುಗ್ರಹವು ನಮ್ಮ ಕುಟುಂಬದ ಮೇಲೆ ಇರುವುದು ಎಷ್ಟೋ ಜನ್ಮಗಳ ಪುಣ್ಯಫಲವಲ್ಲದೇ ಮತ್ತೇನಲ್ಲ. ಈ ಪುಣ್ಯದ ಫಲದಿಂದಾಗಿ ಆ ಗೋಪಾಲಕೃಷ್ಣನು ಈ "ಶ್ರೀ ಕೃಷ್ಣ ವ್ರತ"ವನ್ನು ಅನುಗ್ರಹಿಸಿದ್ದಾನೆಂದು ನಮ್ಮ ವಿಶ್ವಾಸ. ಇಲ್ಲದಿದ್ದರೆ ಸಾಮಾನ್ಯರಾದ ನಾವ್ಯಾರು? ಇಂಥಹ ಅನುಗ್ರಹಕ್ಕೆ ಪಾತ್ರರಾಗುವುದೇನು?

ಆ ಶ್ರೀ ಕೃಷ್ಣನೇ ಅನುಗ್ರಹಿಸಿದ ಈ ವ್ರತವನ್ನು ಆಚರಿಸುವುದು ಅತಿ ಸುಲಭ. ಯಾರಾದರೂ, ಯಾವಾಗಲಾದರೂ ಯಾವುದೇ ನಿಯಮ - ನಿಷ್ಠೆ ಇಲ್ಲದೇ ಸುಲಭವಾಗಿ ಆಚರಿಸಬಹುದು. ಈ ವ್ರತವನ್ನು ಆಚರಿಸುತ್ತಿರುವ ಪ್ರದೇಶದಲ್ಲಿ ಬಾಲಕೃಷ್ಣನು ಅದೃಶ್ಯರೂಪದಲ್ಲಿ ನಾಟ್ಯವಾಡುತ್ತಾನೆ. ಅಲ್ಲಿದ್ದ ಭಕ್ತರೆಲ್ಲರನ್ನು ಖಂಡಿತವಾಗಿ ಅನುಗ್ರಹಿಸುತ್ತಾನೆ. ಅನುಕೂಲವಾದಾಗಲೆಲ್ಲಾ ನಾವೆಲ್ಲರೂ ಈ ವ್ರತವನ್ನು ಆಚರಿಸಿ, ಆ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗೋಣ. ನಮ್ಮ ಜೀವನವನ್ನು ಶುಭಪ್ರದ ಮಾಡಿಕೊಳ್ಳೋಣ.

ಈ ಪುಸ್ತಕ ರಚನೆಗೆ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಸಹಕರಿಸಿದ ಪ್ರತಿಯೊಬ್ಬರಿಗೂ ಶ್ರೀ ಗೋಪಾಲಕೃಷ್ಣನ ಅನುಗ್ರಹಸಿಗಲಿ ಎಂದು ಪ್ರಾರ್ಥಿಸುತ್ತಿದ್ದೇನೆ. ಈ ಶ್ರೀ ಕೃಷ್ಣ ವ್ರತವನ್ನು ಆಚರಿಸಿದ ತಮಗೂ, ವ್ರತ ಕಥೆಗಳನ್ನು ಹೇಳಿದ/ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ, ಸಕಲ ಆಯುರಾರೋಗ್ಯ ಸೌಭಾಗ್ಯಗಳು ಸಿಗಲಿ ಎಂದು ಆ ಶ್ರೀ ಕೃಷ್ಣ ಭಗವಂತನನ್ನು ಪ್ರಾರ್ಥಿಸುತ್ತಿದ್ದೇನೆ.

**ಸ್ವಸ್ತಿ ಪ್ರಜಾಭ್ಯ: ಪರಿಪಾಲಯಂತಾಂ | ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾ: ||**
**ಗೋಬ್ರಾಹಣೇಭ್ಯ: ಶುಭಮಸ್ತು ನಿತ್ಯಂ | ಲೋಕಾ: ಸಮಸ್ತಾ: ಸುಖಿನೋ ಭವಂತು ||**

ಹೈದರಾಬಾದ್ **ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**
ದಿನಾಂಕ: 16-1-2021

************

# ಈ ವ್ರತವನ್ನು ಹೇಗೆ ಆಚರಿಸಬೇಕು?

- ಈ ವ್ರತವನ್ನು ಯಾರಾದರೂ, ಯಾವಾಗಲಾದರೂ, ವಯಸ್ಸಿನಿಂದಾಗಲೀ, ಕುಲದಿಂದಾಗಲೀ, ಭೇದಭಾವವಿಲ್ಲದೇ ಓದಬಹುದು. ಸ್ತ್ರೀ - ಪುರುಷ ಬೇಧವಿಲ್ಲ. ಯಾವ ಮಾಸದಲ್ಲಾಗಲೀ, ಯಾವ ದಿನಗಳಲ್ಲಾಗಲೀ ಓದಬಹುದು. ಅಷ್ಟಮಿ, ಏಕಾದಶಿ, ಹುಣ್ಣಿಮೆ ತಿಥಿಗಳಲ್ಲಾಗಲೀ, ರೋಹಿಣಿ, ಸ್ವಾತಿ, ಶ್ರವಣ ನಕ್ಷತ್ರಗಳಲ್ಲಾಗಲೀ ಪಠಣಮಾಡಿದರೆ ಅತ್ಯಂತ ಶುಭಪ್ರದ. ಬುಧವಾರದ ದಿನ ಓದಿದರೆ ತುಂಬಾ ಉತ್ತಮ. ಅನಂತ ಪುಣ್ಯಫಲ ಸಿಗುತ್ತದೆ. ಯಾವ ರೀತಿಯ ಆಪತ್ತುಗಳೂ ಬಾರದು. ಅಪಮೃತ್ಯುಭಯ ಇರುವುದಿಲ್ಲ. ಓದಲು ಶಕ್ತಿ ಇಲ್ಲದವರಿಗೆ, ಅವರ ಬಂಧುಗಳು ಯಾರಾದರೂ ಓದಿ, ಕೇಳಿದರೂ ಬಹಳ ಫಲ ಸಿಗುತ್ತದೆ. ಈ ವ್ರತವನ್ನು ಆಚರಿಸುವ ದಿನ ಖಂಡಿತಾ ಉಪವಾಸ ಇರಬೇಕೆಂಬ ನಿಯಮ ಇರುವುದಿಲ್ಲ.

- ಶ್ರೀ ಕೃಷ್ಣ ಭಗವಂತನಿಗೆ ಅತ್ಯಂತ ಪ್ರಿಯಕರವಾದ ಶ್ರೀ ಕೃಷ್ಣಾಷ್ಟಮಿಯ ದಿನ, ಫಾಲ್ಗುಣ ಹುಣ್ಣಿಮೆ, ಶ್ರಾವಣ ಹುಣ್ಣಿಮೆ, ವೈಕುಂಠ ಏಕಾದಶಿಯಂತಹ ಪರ್ವದಿನಗಳಲ್ಲಿ ಈ ವ್ರತವನ್ನು ಆಚರಿಸಿದರೆ ಅನಂತ ಫಲದಾಯಕವಾಗಿ ಇರುತ್ತದೆ. ಈ ಶ್ರೀ ಕೃಷ್ಣ ವ್ರತವನ್ನು ಸ್ವಗೃಹದಲ್ಲಾಗಲೀ, ವಸತಿಗೃಹದಲ್ಲಾಗಲೀ, ಯಾವುದೇ ದೇವಾಲಯಗಳಲ್ಲಾಗಲೀ, ನದೀತೀರಗಳಲ್ಲಾಗಲೀ, ಪುಣ್ಯಕ್ಷೇತ್ರಗಳಲ್ಲಾಗಲೀ ಆಚರಿಸಬಹುದು. ಶ್ರೀ ಕೃಷ್ಣನಿಗೆ ಅತ್ಯಂತ ಪ್ರಿಯವಾದ ಮಥುರ, ದ್ವಾರಕ, ಪುರಿ, ಗುರುವಾಯೂರು, ಉಡುಪಿ, ತಿರುಮಲ, ಶ್ರೀರಂಗಂ ನಂತಹ ಪ್ರಮುಖ ಪುಣ್ಯಕ್ಷೇತ್ರದಲ್ಲಿ ಆಚರಿಸಿದರೆ ಹೆಚ್ಚು ಫಲದಾಯಕ.

- ಶ್ರೀ ಕೃಷ್ಣ ವ್ರತವನ್ನು ಆಚರಿಸುವುದು ತುಂಬಾ ಸುಲಭ. ಈ ವ್ರತವನ್ನು ಆಚರಿಸುವ ಮೊದಲು ಒಂದು ಬಾರಿ ಮನಸಲ್ಲೇ ಶ್ರೀ ವಿನಾಯಕನಿಗೆ, ನವಗ್ರಹದೇವತೆಗಳಿಗೆ, ಅಷ್ಟದಿಕ್ಪಾಲಕರಿಗೆ ನಮಸ್ಕರಿಸಬೇಕು. ಆನಂತರ ನಿಮ್ಮ ಹೆಸರು, ನಿಮ್ಮ ಕುಟುಂಬದ ಸದಸ್ಯರ ಹೆಸರುಗಳು, ನಕ್ಷತ್ರ ಮತ್ತು ಗೋತ್ರವನ್ನು ಮನಸ್ಸಲ್ಲೇ ಸ್ಮರಿಸಿ ವ್ರತವನ್ನು ಪ್ರಾರಂಭಿಸಬೇಕು. ಅಷ್ಟೋತ್ತರ ನಾಮ ಪಠಿಸಬೇಕು. ಶ್ರೀ ದೇವರ ಅಂಗ ಪೂಜೆಮಾಡಿ ನಂತರ ಈ ಪುಸ್ತಕದಲ್ಲಿರುವ ಐದು ಕಥೆಗಳನ್ನು ಓದಿ ದೇವರಿಗೆ ಯಾವುದಾದರೂ ಹಣ್ಣು ನಿವೇದಿಸಬೇಕು.

- ಈ ಶ್ರೀ ಕೃಷ್ಣ ವ್ರತವನ್ನು ಆಚರಿಸುವಾಗ ಪತಿ-ಪತ್ನಿ ಇಬ್ಬರು ಖಂಡಿತಾ ಒಟ್ಟಿಗೆ ಇದ್ದು ಆಚರಿಸಬೇಕೆಂಬ ನಿಯಮ ಇಲ್ಲ. ಪತಿಗೆ ಅನುಕೂಲವಾದಾಗ ಪತಿ, ಪತ್ನಿಗೆ ಅನುಕೂಲವಾದಾಗ ಪತ್ನಿ ಹೀಗೆ ಅವರವರ ಅನುಕೂಲದಂತೆ ಅವರು ಆಚರಿಸಬಹುದು.

- ದುರದೃಷ್ಟದಿಂದ ಪತ್ನಿಯನ್ನು ಕಳೆದುಕೊಂಡ ಪುರುಷರು, ಪತಿಯನ್ನು ಕಳೆದುಕೊಂಡ ಮಹಿಳೆಯರು ಕೂಡ ನಿರಭ್ಯಂತರವಾಗಿ ಈ ವ್ರತವನ್ನು ಆಚರಿಸಬಹುದು. ಈ ವ್ರತವನ್ನು ಆಚರಿಸಿದವರಿಗೆ ಪೂರ್ತಿ ಮನಶಾಂತಿ ಉಂಟಾಗುತ್ತದೆ.

- ಸಂತಾನವನ್ನು ಬಯಸುವವರು ಸರತಿನಲ್ಲಿ 7 ಬುಧವಾರ ಈ ವ್ರತವನ್ನು ಆಚರಿಸಿದರೆ ಅತೀ ಶೀಘ್ರದಲ್ಲೇ ಒಳ್ಳೆಯ ಸಂತಾನವನ್ನು ಪಡೆಯುತ್ತಾರೆ. ಹಾಗೇ ಆರ್ಥಿಕ

ಸಮಸ್ಯೆಯಿಂದ ಬಳಲುವವರು 7 ವಾರ ವ್ರತವನ್ನು ಆಚರಿಸಿದರೆ ಆ ಸಮಸ್ಯೆಗಳೆಲ್ಲಾ ಕೂಡಲೇ ಪರಿಹಾರವಾಗುತ್ತದೆ. ಶ್ರೀ ಕೃಷ್ಣಾಷ್ಟಮಿಯ ದಿನ ಈ ವ್ರತವನ್ನು ಆಚರಿಸಿದರೆ ಅತ್ಯಂತ ಶುಭಪ್ರದ.

- ವಿವಾಹವಾಗದ ಯುವಕ, ಯುವತಿಯರು ಈ ವ್ರತವನ್ನು ಆಚರಿಸಿದರೆ ಅವರಿಗೆ ಯೋಗ್ಯ ಬಾಳಸಂಗಾತಿ ಸಿಗುತ್ತಾರೆ. ಯಾವುದೇ ಕೆಲಸ ತುಂಬಾ ನಿಧಾನವಾಗಿ ಕಾರ್ಯ ನಿರ್ವಹಿಸುತ್ತಿದ್ದರೆ ಈ ವ್ರತವನ್ನು ಆಚರಿಸಿದರೆ ಅಡೆತಡೆಗಳೆಲ್ಲಾ ತೊಲಗಿ ಆ ಕೆಲಸವು ಬೇಗನೇ ನಿರಾಯಾಸವಾಗಿ ನೆರವೇರುತ್ತದೆ.

- ಯಾವುದಾದರೂ ಶುಭಕಾರ್ಯ ಮಾಡುವ ಮೊದಲು, ಈ ವ್ರತವನ್ನು ಆಚರಿಸಿದರೆ ಶ್ರೀ ಕೃಷ್ಣನ ಅನುಗ್ರಹದಿಂದ ಆ ಕೆಲಸಕಾರ್ಯಗಳಲ್ಲಿ ನಿರಾತಂಕವಾಗಿ ನೆರವೇರುತ್ತದೆ. ಮನಸ್ಸಲ್ಲಿ ಅಶಾಂತಿ ಇರುವಾಗ, ಎಣಿಸದೇ ಯಾವುದಾದರೂ ಕಷ್ಟಬಂದಾಗ ತಿಥಿ, ವಾರ, ನಕ್ಷತ್ರಗಳಲ್ಲಿ ದೋಷ ನೋಡದೇ ಈ ವ್ರತವನ್ನು ಆಚರಿಸಬಹುದು. ಆ ಸ್ವಾಮಿಯ ಅನುಗ್ರಹದಿಂದ ಮನಸ್ಸು ಪ್ರಶಾಂತವಾಗಿ ಆ ಕಷ್ಟಗಳೆಲ್ಲಾ ತೊಲಗುತ್ತವೆ.

- ಅನುಕೂಲವಾದರೆ ಈ ವ್ರತವನ್ನು ಪುರೋಹಿತರ ಸಹಾಯದಿಂದ ಆಚರಿಸಿದರೆ ಒಳ್ಳೆಯದು. ಕಲಶ ಸ್ಥಾಪನೆ ಮಾಡಿ ಅಷ್ಟದಿಕ್ಪಾಲಕರನ್ನು, ನವಗ್ರಹದೇವತೆಗಳನ್ನು, ಲೋಕಪಾಲಕರನ್ನು ಮಂಟಪದಲ್ಲಿ ಆಯಾ ದಿಕ್ಕಿನಲ್ಲಿ ಆವಾಹನೆ ಮಾಡಿ ಪೂರ್ತಿ ವಿಧಾನದಿಂದ ಈ ವ್ರತವನ್ನು ಆಚರಿಸಿದರೆ ಶುಭಪ್ರದ.

- ಮತ್ತೊಂದು ಮುಖ್ಯ ವಿಶೇಷವೇನೆಂದರೆ, ಶ್ರೀ ಕೃಷ್ಣನಿಗೆ ತನ್ನ ಭಕ್ತರೆಂದರೆ ತುಂಬಾ ಪ್ರೀತಿ ಮತ್ತು ಅನುರಾಗ. ಈ ವ್ರತವನ್ನು ಎಲ್ಲಿ ಆಚರಿಸುತ್ತಾರೋ ಅಲ್ಲಿ "ಬಾಲಕೃಷ್ಣನ ರೂಪದಲ್ಲಿ ತಾನು ಅದೃಶ್ಯವಾಗಿ ನಾಟ್ಯಮಾಡುತ್ತೇನೆ ಎಂದು ಶ್ರೀ ದೇವರೇ ಹೇಳಿದ್ದಾರೆ. ಬಾಲಕೃಷ್ಣನ ಗೆಜ್ಜೆಯನಾದ, ಕೊಳಲಿನ ಧ್ವನಿ ಕೂಡ ಭಕ್ತರಿಗೆ ಕೇಳಿಸುತ್ತದೆ. ಯಾರು ಈ 'ಶ್ರೀ ಕೃಷ್ಣ ವ್ರತ'ವನ್ನು ಅತ್ಯಂತ ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೋ, ಅಲ್ಲಿ ಆ ಬಾಲಕೃಷ್ಣನ ಹೆಜ್ಜೆಯ ಗುರುತು ಕೂಡಾ ದರ್ಶನ ಕೊಡುತ್ತದೆ ಎಂದು ಸಾಕ್ಷಾತ್ ಆ ಶ್ರೀ ಕೃಷ್ಣ ಭಗವಂತನೇ ತಿಳಿಸಿದ್ದಾನೆ. ಆ ಪ್ರದೇಶದಲ್ಲಿ, ಆ ದಿನವಿಡೀ ತಾನು ಆಟವಾಡುತ್ತಾ, ಹಾಡುಹೇಳುತ್ತಾ, ಆನಂದದಿಂದ ತಿರುಗುತ್ತಿರುತ್ತೇನೆಂದು" ಶ್ರೀ ಕೃಷ್ಣ ಭಗವಂತನೇ ತಿಳಿಸಿದ್ದಾನೆ.

ಈ ವಿಧವಾಗಿ, ಯಾವ ರೀತಿಯಲ್ಲಾಗಲೀ, ಯಾವ ದಿನದಲ್ಲಾಗಲೀ ಈ ಪುಸ್ತಕವನ್ನು ಓದಿ ಶ್ರೀ ಕೃಷ್ಣ ಭಗವಂತನ ಅನುಗ್ರಹವನ್ನು ಪಡೆದುಕೊಳ್ಳಬಹುದು.

********

# ಶ್ರೀ ಕೃಷ್ಣ ವ್ರತ

## ಅಂಗ ಪೂಜಾ

ಓಂ ಶ್ರೀಕೃಷ್ಣಾಯ ನಮಃ | ಪಾದೌ ಪೂಜಯಾಮಿ |
ಓಂ ರಾಜೀವಲೋಚನಾಯ ನಮಃ | ಗುಲ್ಫೌ ಪೂಜಯಾಮಿ |
ಓಂ ವಾಚಸ್ಪತಯೇ ನಮಃ | ಜಂಘೇ ಪೂಜಯಾಮಿ |
ಓಂ ನರಕಾಂತಕಾಯ ನಮಃ | ಓಂ ಜಾನುನೀ ಪೂಜಯಾಮಿ |
ಓಂ ವಿಶ್ವರೂಪಾಯ ನಮಃ | ಊರೂ ಪೂಜಯಾಮಿ |
ಓಂ ಬಲಭದ್ರಾನುಜಾಯ ನಮಃ | ಗುಹ್ಯಂ ಪೂಜಯಾಮಿ |
ಓಂ ವಿಶ್ವಮೂರ್ತಯೇ ನಮಃ | ಜಘನಂ ಪೂಜಯಾಮಿ |
ಓಂ ಗೋಪೀಜನಪ್ರಿಯಾಯ ನಮಃ | ಕಟಿಂ ಪೂಜಯಾಮಿ |
ಓಂ ಪರಮಾತ್ಮನೇ ನಮಃ | ಉದರಂ ಪೂಜಯಾಮಿ |
ಓಂ ಶ್ರೀಕಂಠಾಯ ನಮಃ | ಹೃದಯಂ ಪೂಜಯಾಮಿ |
ಓಂ ಯಜ್ಞಿನೇ ನಮಃ | ಪಾರ್ಶ್ವೇ ಪೂಜಯಾಮಿ |
ಓಂ ತ್ರಿವಿಕ್ರಮಾಯ ನಮಃ | ಪೃಷ್ಠ ದೇಶಂ ಪೂಜಯಾಮಿ |
ಓಂ ಪದ್ಮನಾಭಾಯ ನಮಃ | ಸ್ಕಂದೌ ಪೂಜಯಾಮಿ
ಓಂ ಸರ್ವಾಸ್ತ್ರಧಾರಿಣೇ ನಮಃ | ಭುಜೌ ಪೂಜಯಾಮಿ |
ಓಂ ಕಮಲಾನಾಥಾಯ ನಮಃ | ಹಸ್ತೌ ಪೂಜಯಾಮಿ |
ಓಂ ವಾಸುದೇವಾಯ ನಮಃ | ಕಂಠಂ ಪೂಜಯಾಮಿ |
ಓಂ ಸನಾತನಾಯ ನಮಃ | ವದನಂ ಪೂಜಯಾಮಿ |
ಓಂ ವಸುದೇವಾತ್ಮಜಾಯ ನಮಃ | ನಾಸಿಕಾಂ ಪೂಜಯಾಮಿ |
ಓಂ ಪುಣ್ಯಾಯ ನಮಃ | ಶ್ರೋತ್ರೇ ಪೂಜಯಾಮಿ ।
ಓಂ ಶ್ರೀಶಾಯ ನಮಃ | ನೇತ್ರೇ ಪೂಜಯಾಮಿ |
ಓಂ ನಂದಗೋಪಪ್ರಿಯಾಯ ನಮಃ | ಭ್ರುವಂ ಪೂಜಯಾಮಿ |
ಓಂ ದೇವಕೀನಂದನಾಯ ನಮಃ | ಭ್ರೂಮಧ್ಯಮ್ ಪೂಜಯಾಮಿ |
ಓಂ ಶಕಟಾಸುರಮರ್ದನಾಯ ನಮಃ | ಲಲಾಟಂ ಪೂಜಯಾಮಿ |
ಓಂ ಶ್ರೀ ಕೃಷ್ಣಾಯ ನಮಃ | ಶಿರಃ ಪೂಜಯಾಮಿ |
ಓಂ ಶ್ರೀ ಬಾಲಕೃಷ್ಣಾಯ ನಮಃ | ಸರ್ವಾಣ್ಯಂಗಾನಿ ಪೂಜಯಾಮಿ |

********

## ಶ್ರೀ ಕೃಷ್ಣ ಅಷ್ಟೋತ್ತರ ಶತನಾಮಾವಳಿ

ಓಂ ಕೃಷ್ಣಾಯ ನಮಃ |
ಓಂ ಕಮಲಾನಾಥಾಯ ನಮಃ |
ಓಂ ವಾಸುದೇವಾಯ ನಮಃ |
ಓಂ ಸನಾತನಾಯ ನಮಃ |
ಓಂ ವಸುದೇವಾತ್ಮಜಾಯ ನಮಃ |
ಓಂ ಪುಣ್ಯಾಯ ನಮಃ |

ಓಂ ಲೀಲಾಮಾನುಷವಿಗ್ರಹಾಯ ನಮಃ |
ಓಂ ಶ್ರೀವತ್ಸ ಕೌಸ್ತುಭಧರಾಯ ನಮಃ |
ಓಂ ಯಶೋದಾವತ್ಸಲಾಯ ನಮಃ |
ಓಂ ಹರಿಯೇ ನಮಃ | (10)
ಓಂ ಚತುರ್ಭುಜಾತ್ತ ಚಕ್ರಾಸಿ ಗದಾಶಂಖಾದ್ಯುದಾಯುಧಾಯ ನಮಃ |
ಓಂ ದೇವಕೀನಂದನಾಯ ನಮಃ |
ಓಂ ಶ್ರೀಶಾಯ ನಮಃ |
ಓಂ ನಂದಗೋಪಪ್ರಿಯಾತ್ಮಜಾಯ ನಮಃ |
ಓಂ ಯಮುನಾವೇಗಸಂಹಾರಿಣೇ ನಮಃ |
ಓಂ ಬಲಭದ್ರ ಪ್ರಿಯಾನುಜಾಯ ನಮಃ |
ಓಂ ಪೂತನಾಜೀವಿತ ಹರಾಯ ನಮಃ |
ಓಂ ಶಕಟಾಸುರ ಭಂಜನಾಯ ನಮಃ |
ಓಂ ನಂದವ್ರಜ ಜನಾನಂದಿನೇ ನಮಃ |
ಓಂ ಸಚ್ಚಿದಾನಂದ ವಿಗ್ರಹಾಯ ನಮಃ | (20)
ಓಂ ನವನೀತ ವಿಲಿಪ್ತಾಂಗಾಯ ನಮಃ |
ಓಂ ನವನೀತ ನಟಾಯ ನಮಃ |
ಓಂ ಅನಘಾಯ ನಮಃ |
ಓಂ ನವನೀತ ನವಾಹಾರಾಯ ನಮಃ |
ಓಂ ಮುಚುಕುಂದ ಪ್ರಸಾದಕಾಯ ನಮಃ |
ಓಂ ಷೋಡಶಸ್ತ್ರೀ ಸಹಸ್ರೇಶಾಯ ನಮಃ |
ಓಂ ತ್ರಿಭಂಗಿನೇ ನಮಃ |
ಓಂ ಮಧುರಾಕೃತಯೇ ನಮಃ |
ಓಂ ಶುಕವಾಗಮೃತಾಬ್ಧೀಂದವೇ ನಮಃ |
ಓಂ ಗೋವಿಂದಾಯ ನಮಃ | (30)
ಓಂ ಯೋಗಿನಾಂಪತಯೇ ನಮಃ |
ಓಂ ವತ್ಸವಾದ ಚರಾಯ ನಮಃ |
ಓಂ ಅನಂತಾಯ ನಮಃ |
ಓಂ ಧೇನುಕಾಸುರಭಂಜನಾಯ ನಮಃ |
ಓಂ ತೃಣೀಕೃತ ತೃಣಾವರ್ತಾಯ ನಮಃ |
ಓಂ ಯಮಳಾರ್ಜುನ ಭಂಜನಾಯ ನಮಃ |
ಓಂ ಉತ್ತಲತಾ  ಭೇತ್ರೇ ನಮಃ |
ಓಂ ತಮಾಲ ಶ್ಯಾಮಲಾಕೃತಯೇ ನಮಃ |
ಓಂ ಗೋಪಗೋಪೀಶ್ವರಾಯ ನಮಃ |
ಓಂ ಯೋಗಿನೇ ನಮಃ | (40)
ಓಂ ಕೋಟಿಸೂರ್ಯ ಸಮಪ್ರಭಾಯ ನಮಃ |
ಓಂ ಇಲಾಪತಯೇ ನಮಃ |
ಓಂ ಪರಂಜ್ಯೋತಿಷೇ ನಮಃ |
ಓಂ ಯಾದವೇಂದ್ರಾಯ ನಮಃ |

ಓಂ ಯದೂದ್ವಹಾಯ ನಮಃ |
ಓಂ ವನಮಾಲಿನೇ ನಮಃ |
ಓಂ ಪೀತವಾಸಸೇ ನಮಃ |
ಓಂ ಪಾರಿಜಾತಾಪಹಾರಕಾಯ ನಮಃ |
ಓಂ ಗೋವರ್ಧನಾಚಲೋದ್ಧರ್ತ್ರೇ ನಮಃ |
ಓಂ ಗೋಪಾಲಾಯ ನಮಃ | (50)
ಓಂ ಸರ್ವಪಾಲಕಾಯ ನಮಃ |
ಓಂ ಅಜಾಯ ನಮಃ |
ಓಂ ನಿರಂಜನಾಯ ನಮಃ |
ಓಂ ಕಾಮಜನಕಾಯ ನಮಃ |
ಓಂ ಕಂಜಲೋಚನಾಯ ನಮಃ |
ಓಂ ಮಧುಘ್ನೇ ನಮಃ |
ಓಂ ಮಧುರಾನಾಥಾಯ ನಮಃ |
ಓಂ ದ್ವಾರಕಾನಾಯಕಾಯ ನಮಃ |
ಓಂ ಬಲಿನೇ ನಮಃ |
ಓಂ ವೃಂದಾವನಾಂತಃ ಸಂಚಾರಿಣೇ ನಮಃ | (60)
ಓಂ ತುಳಸಿದಾಮಭೂಷಣಾಯ ನಮಃ |
ಓಂ ಸ್ಯಮಂತಕಮಣೆರ್ಹರ್ತ್ರೇ ನಮಃ |
ಓಂ ನರನಾರಯಣಾತ್ಮಕಾಯ ನಮಃ |
ಓಂ ಕುಬ್ಜಾಗಂಧಾನುಲಿಪ್ತಾOಗಾಯ ನಮಃ |
ಓಂ ಮಾಯಿನೇ ನಮಃ |
ಓಂ ಪರಮಪೂರುಷಾಯ ನಮಃ |
ಓಂ ಮುಷ್ಟಿಕಾಸುರ ಚಾಣೂರ ಮಲ್ಲಯುದ್ದ ವಿಶಾರದಾಯ ನಮಃ |
ಓಂ ಸಂಸಾರವೈರಿಣೇ ನಮಃ |
ಓಂ ಕಂಸಾರಯೇ ನಮಃ |
ಓಂ ಮುರಾರಯೇ ನಮಃ | (70)
ಓಂ ನರಕಾಂತಕಾಯ ನಮಃ |
ಓಂ ಅನಾದಿಬ್ರಹ್ಮಚಾರಿಣೇ ನಮಃ |
ಓಂ ಕೃಷ್ಣಾವ್ಯಸನ ಕರ್ಷಕಾಯ ನಮಃ |
ಓಂ ಶಿಶುಪಾಲಶಿರಚ್ಛೇತ್ರೆ ನಮಃ |
ಓಂ ದುರ್ಯೋಧನಕುಲಾಂತಕಾಯ ನಮಃ |
ಓಂ ವಿದುರಾಕ್ರೂರ ವರದಾಯ ನಮಃ |
ಓಂ ವಿಶ್ವರೂಪಪ್ರದರ್ಶಕಾಯ ನಮಃ |
ಓಂ ಸತ್ಯವಾಚೇ ನಮಃ |
ಓಂ ಸತ್ಯಸಂಕಲ್ಪಾಯ ನಮಃ |
ಓಂ ಸತ್ಯಭಾಮಾರತಾಯ ನಮಃ | (80)
ಓಂ ಜಯಿನೇ ನಮಃ |

ಓಂ ಸುಭದ್ರಾ ಪೂರ್ವಜಾಯ ನಮಃ |
ಓಂ ವಿಷ್ಣವೇ ನಮಃ |
ಓಂ ಭೀಷ್ಮಮುಕ್ತಿ ಪ್ರದಾಯಕಾಯ ನಮಃ |
ಓಂ ಜಗದ್ಗುರುವೇ ನಮಃ |
ಓಂ ಜಗನ್ನಾಥಾಯ ನಮಃ |
ಓಂ ವೇಣುನಾದ ವಿಶಾರದಾಯ ನಮಃ |
ಓಂ ವೃಷಭಾಸುರ ವಿಧ್ವಂಸಿನೇ ನಮಃ |
ಓಂ ಬಾಣಾಸುರ ಕರಾಂತಕೃತೇ ನಮಃ | (90)
ಓಂ ಯುಧಿಷ್ಠಿರ ಪ್ರತಿಷ್ಠಾತ್ರೆ ನಮಃ |
ಓಂ ಬರ್ಹಿಬರ್ಹಾವತಂಸಕಾಯ ನಮಃ |
ಓಂ ಪಾರ್ಥಸಾರಥಯೇ ನಮಃ |
ಓಂ ಅವ್ಯಕ್ತಾಯ ನಮಃ |
ಓಂ ಗೀತಾಮೃತ ಮಹೋಧಧಯೇ ನಮಃ |
ಓಂ ಕಾಳೀಯ ಫಣಿಮಾಣಿಕ್ಯರಂಜಿತ ಶ್ರೀ ಪದಾಂಬುಜಾಯ ನಮಃ |
ಓಂ ದಾಮೋದರಾಯ ನಮಃ |
ಓಂ ಯಜ್ಞಭೋಕ್ತ್ರೆ ನಮಃ |
ಓಂ ದಾನವೆಂದ್ರ ವಿನಾಶನಾಯ ನಮಃ |
ಓಂ ನಾರಾಯಣಾಯ ನಮಃ | (110)
ಓಂ ಪರಬ್ರಹ್ಮಣೇ ನಮಃ |
ಓಂ ಪನ್ನಗಾಶನ ವಾಹನಾಯ ನಮಃ |
ಓಂ ಜಲಕ್ರೀಡಾ ಸಮಾಸಕ್ತಾಯ ನಮಃ |
ಓಂ ಗೋಪೀವಸ್ತ್ರಾಪಹಾರಾಕಾಯ ನಮಃ |
ಓಂ ಪುಣ್ಯಶ್ಲೋಕಾಯ ನಮಃ |
ಓಂ ತೀರ್ಥಪಾದಾಯ ನಮಃ |
ಓಂ ವೇದವೇದ್ಯಾಯ ನಮಃ |
ಓಂ ದಯಾನಿಧಯೇ ನಮಃ | (108)
ಓಂ ಪರಾತ್ಪರಾಯ ನಮಃ |
ಓಂ ಸರ್ವತೀರ್ಥಾತ್ಮಕಾಯ ನಮಃ |
ಓಂ ಸರ್ವಗ್ರಹರೂಪಿಣೆE ನಮಃ |

********

## **ಶ್ರೀ ಕೃಷ್ಣ ಪ್ರಾರ್ಥನ**

ಕರಾರವಿಂದೇನ ಪಾದಾರವಿಂದಂ ಮುಖಾರವಿಂದೇ ವಿನಿವೇಶಯಂತಂ |
ವಟಸ್ಯ ಪತ್ರಸ್ಯ ಪುಟೇ ಶಯಾನಂ ಬಾಲಂ ಮುಕುಂದಂ ಮನಸಾ ಸ್ಮರಾಮಿ ||
ಕಸ್ತುರೀ ತಿಲಕಂ ಲಲಾಟ ಫಲಕೇ ವಕ್ಷಸ್ಥಳೇ ಕೌಸ್ತುಭಮ್ |
ನಾಸಾಗ್ರೇ ನವ ಮೌಕ್ತಿಕಮ್ ಕರತಲೇ ವೇಣುಂ ಕರೇ ಕಂಕಣಂ ||
ಸರ್ವಾಂಗೇ ಹರಿ ಚಂದನಂ ಚ ಕಲಯನ್ ಕಂಠೇ ಚ ಮುಕ್ತವಳಿಮ್ |
ಗೋಪಸ್ತ್ರೀ ಪರಿವೇಷ್ಠಿತೋ ವಿಜಯತೇ ಗೋಪಾಲ ಚೂಡಾಮಣಿಹಿ ||

********

# ಶ್ರೀ ಕೃಷ್ಣ ವ್ರತ

ಪ್ರಥಮ ಅಧ್ಯಾಯ

## ಭಗವಾನ್ ಶ್ರೀಕೃಷ್ಣನ ಅನುಗ್ರಹ ಸಂದೇಶ

ಶ್ರೀ ಕೃಷ್ಣನು ದಯಾಸ್ವರೂಪನು. ಪರಮಪ್ರೇಮಮೂರ್ತಿ. ತುಂಬಾ ಸುಂದರವಾದ ಸ್ವರೂಪವುಳ್ಳವನು. ಶ್ರೀ ಕೃಷ್ಣ ಎಂದರೆನೇ ಸಮಸ್ತ ಸೃಷ್ಟಿಯನ್ನು ತನ್ನಕಡೆಗೆ ಆಕರ್ಷಿಸುವವನು ಎಂದರ್ಥ. ವಿಶ್ವಕ್ಕೆಲ್ಲಾ ಆನಂದವನ್ನು ಕೊಡುವ ಆನಂದಮೂರ್ತಿ. ಶ್ರೀ ಕೃಷ್ಣನಿಗೆ ತನ್ನ ಭಕ್ತರೆಂದರೆ ಎಲ್ಲಿಲ್ಲದ ಅಭಿಮಾನ. ತನ್ನನ್ನೇ ನಂಬಿದವರನ್ನು ಆ ಗೋಪಾಲನು, ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುತ್ತಾನೆ. ಆ ಗೋವಿಂದನ ಅನುಗ್ರಹವನ್ನು ಪಡೆಯಲು ಯಾವ ಯಜ್ಞ-ಯಾಗಗಳನ್ನು ಮಾಡುವ ಅವಸರವಿಲ್ಲ. ಕೇವಲ ಗೋವಿಂದಾ... ಗೋಪಾಲಾ... ಗೋಕುಲನಾಥಾ... ಎಂದು ಭಕ್ತಿಯಿಂದ ಒಂದು ಸಲ ಕರೆದರೆ ಸಾಕು, ಆ ಗೋಪಾಲನು ತಕ್ಷಣ ಬಂದು ನಮ್ಮನ್ನು ಅನುಗ್ರಹಿಸುತ್ತಾನೆ. ಆ ಗೋಕುಲನಂದನನು ಅಂತಹ ಕರುಣಾಮೂರ್ತಿ. ಶ್ರೀ ಕೃಷ್ಣ ಭಗವಂತನು ಒಂದಾನೊಂದು ದಿನ "ವಿಶ್ವಪತಿ" ಎಂಬ ಭಕ್ತನಿಗೆ ಸ್ವಪ್ನದಲ್ಲಿ ದರ್ಶನಕೊಟ್ಟು, ವಿಶ್ವಪತಿ - ರುಕ್ಮಿಣಿ ದಂಪತಿಗಳನ್ನು ಅನುಗ್ರಹಿಸಿ ಕಲಿಯುಗದಲ್ಲಿ ತನ್ನ ಭಕ್ತರಿಗಾಗಿ ಒಂದು ದಿವ್ಯ ವ್ರತವನ್ನು ಅನುಗ್ರಹಿಸಿದನು. ನಮ್ಮೆಲ್ಲಾ ಕಷ್ಟಗಳು ಆ ದೇವರಿಗೆ ತಿಳಿದ ಹಾಗೆ ಅನ್ಯರಿಗೆ ತಿಳಿಯದು. ಅದಕ್ಕಾಗಿ ಆ ದೇವರು ತನ್ನ ಅನುಗ್ರಹವನ್ನು ಪಡೆಯಲು ಅತ್ಯಂತ ಸುಲಭವಾದ ವ್ರತವಿಧಾನವನ್ನು ನಮಗೆ ಈ ದಂಪತಿಯ ಮುಖಾಂತರ ಅನುಗ್ರಹಿಸಿದರು.

ಶ್ರೀ ಕೃಷ್ಣ ಭಗವಂತನು ವಿಶ್ವಪತಿಯವರಿಗೆ ಸ್ವಪ್ನದಲ್ಲಿ ಅದ್ಭುತವಾದ ದರ್ಶನಕೊಟ್ಟು ವಿಶ್ವಪತಿ - ರುಕ್ಮಿಣಿ ದಂಪತಿಗಳಿಗೆ ಕಲಿಯುಗದಲ್ಲಿ ತನ್ನ ಅನುಗ್ರಹವನ್ನು ಪಡೆಯಲು ಅತಿ ಸುಲಭವಾದ ವ್ರತವಿಧಾನವನ್ನು ಈ ವಿಧವಾಗಿ ಉಪದೇಶಿಸಿದರು. “ಓ ಪ್ರೀತಿಯ ದಂಪತಿಗಳೇ! ನಿಮ್ಮ ಮೇಲೆ ತುಂಬಾ ಅನುರಾಗ, ಅಪ್ಯಾಯತೆ. ಈಗ ನಾನು ಕಲಿಯುಗದಲ್ಲಿ ನನ್ನ ಅನುಗ್ರಹವನ್ನು ಪಡೆಯಲು ಒಂದು ಸುಲಭ ವ್ರತವಿಧಾನವನ್ನು ವಿವರಿಸುತ್ತಿದ್ದೇನೆ. ಇದನ್ನು ನೀವು ಈ ಲೋಕದ ನನ್ನ ಭಕ್ತರಿಗೆಲ್ಲಾ ಪ್ರಸರಿಸಿರಿ. ಈ ವ್ರತವು ಅತ್ಯಂತ ಸುಲಭವಾದದ್ದು. ಯಾರಾದರೂ, ಕುಲ, ವಯಸ್ಸು, ಸ್ತ್ರೀ - ಪುರುಷ ಭೇಧವಿಲ್ಲದೇ ಯಾವಾಗ ಬೇಕಾದರೂ ಆಚರಿಸಬಹುದು. ಮುಖ್ಯವಾಗಿ ಏಕಾದಶಿ, ಹುಣ್ಣಿಮೆ ತಿಥಿಗಳಲ್ಲಿ ಅಥವಾ ರೋಹಿಣಿ, ಸ್ವಾತಿ, ಶ್ರವಣ ನಕ್ಷತ್ರಗಳಿರುವ ದಿನಗಳಲ್ಲಿ ಆಚರಿಸಿದರೆ ಹೆಚ್ಚಿನ ಫಲವನ್ನು ಪಡೆಯಬಹುದು. ನನ್ನ ಅನುಗ್ರಹವನ್ನು ಆಶಿಸುವ ಭಕ್ತರು ಈ ಪ್ರತ್ಯೇಕ ದಿನಗಳಲ್ಲಿ ಅಲ್ಲದೇ, ಅವರಿಗೆ ಅನುಕೂಲವಾದ ಯಾವ ದಿನಗಳಲ್ಲಾದರೂ ಈ ವ್ರತವನ್ನು ಆಚರಿಸಬಹುದು.

ಈ “ಶ್ರೀ ಕೃಷ್ಣ ವ್ರತ”ವನ್ನು ತಮ್ಮ ಸ್ವಗೃಹದಲ್ಲಾಗಲೀ, ವಸತಿಗೃಹದಲ್ಲಾಗಲೀ, ಯಾವುದೇ ದೇವಸ್ಥಾನದಲ್ಲಾಗಲೀ, ಪವಿತ್ರ ನದೀ ತೀರಗಳಲ್ಲಾಗಲೀ, ಪುಣ್ಯ ತೀರ್ಥಕ್ಷೇತ್ರಗಳಲ್ಲಾಗಲೀ ಅಥವಾ ಇತರ ಅನುಕೂಲಕರವಾದ ಆದರೆ ಉತ್ತಮವಾದ ಸ್ಥಳಗಳಲ್ಲಾಗಲೀ ಆಚರಿಸಬಹುದಾಗಿದೆ. ನನಗೆ ಅತ್ಯಂತ ಪ್ರಿಯವಾದ ಮಥುರಾ, ದ್ವಾರಕಾ, ಪುರಿ, ಗುರುವಾಯೂರು, ಉಡುಪಿ, ತಿರುಮಲ, ಶ್ರೀರಂಗಂ - ಇಂತಹ ಪ್ರಮುಖ ಪುಣ್ಯಕ್ಷೇತ್ರಗಳಲ್ಲಿ ಆಚರಿಸಿದರೆ ಅತ್ಯಂತ ಫಲದಾಯಕ.

ಈ ಶ್ರೀ ಕೃಷ್ಣ ವ್ರತವನ್ನು ಆಚರಿಸುವುದು ಅತಿ ಸುಲಭ. ಮುಂಜಾನೆ ಸ್ನಾನವನ್ನು ಮಾಡಿ ನಿಮ್ಮ ಮನೆಯಲ್ಲಿರುವ ಪೂಜಾಮಂದಿರದಲ್ಲಿ ನನ್ನ ವಿಗ್ರಹವನ್ನಾಗಲೀ, ಚಿತ್ರಪಟವನ್ನಾಗಲೀ ಇಡಬೇಕು. ಈ ವ್ರತವನ್ನು ದಂಪತಿಗಳಿಬ್ಬರೂ ಒಟ್ಟಾಗಿ ಅಥವಾ ಬೇರೆ ಬೇರೆಯಾಗಿ, ಯಾರಿಗೆ ಅನುಕೂಲವಾದಾಗ ಅವರು ವ್ರತವನ್ನು ಆಚರಿಸಬಹುದು. ಈ ವ್ರತವನ್ನು ಆಚರಿಸಿದ ಅತಿ ಶೀಘ್ರದಲ್ಲೇ ನಿಮ್ಮ ಕೋರಿಕೆಗಳು ನೆರವೇರುತ್ತವೆ. ವಿವಾಹ ಆಗದವರು ಆಚರಿಸಿದರೆ ಕೂಡಲೇ ವಿವಾಹವಾಗುತ್ತದೆ. ಅನಾರೋಗ್ಯ ಇದ್ದವರಿಗೆ ತಕ್ಷಣ ಅವರ ಅನಾರೋಗ್ಯ ಪರಿಹಾರವಾಗುತ್ತದೆ. ಪ್ರತಿ ತಿಂಗಳು, ಈ ವ್ರತವನ್ನು ಆಚರಿಸುವವರಿಗೆ ಯಾವುದೇ ಆಪತ್ತುಬಾರದು. ಕೈಹಿಡಿದ ಕೆಲಸಕಾರ್ಯಗಳಲ್ಲಿ ಜಯ ದೊರಕುತ್ತದೆ. ಸರ್ವ ಶುಭಗಳು ಆಗುತ್ತವೆ. ಈ ವ್ರತವನ್ನು ಆಚರಿಸದೇ ಕೇವಲ ಕಥೆಗಳನ್ನು ಓದಿದರೂ, ಕೇಳಿದರೂ, ಪ್ರಸಾದವನ್ನು ಸ್ವೀಕರಿಸಿದರೂ, ಅತ್ಯಂತ ಪುಣ್ಯ ದೊರಕುತ್ತದೆ.

ಶ್ರೀ ಕೃಷ್ಣ ವ್ರತವನ್ನು ಆಚರಿಸಲು, ಮೊದಲನೆಯದಾಗಿ ಶ್ರೀ ವಿನಾಯಕನನ್ನು, ಅಷ್ಟದಿಕ್ಪಾಲಕರನ್ನು ಹಾಗೂ ನವಗ್ರಹದೇವತೆಗಳನ್ನು ಮನಸ್ಸಿನ್ನಲ್ಲೇ ಪ್ರಾರ್ಥಿಸಬೇಕು. ನಂತರ 5 ಕಥೆಗಳನ್ನು ಓದಬೇಕು. ಪ್ರತಿ ಅಧ್ಯಾಯದ ಕೊನೆಯಲ್ಲಿ ಗೋವಿಂದಾ... ಗೋಪಾಲಾ... ಗೋಕುಲಾನಂದನಾ... ಎಂದು ಸ್ಮರಿಸಬೇಕು. ನಿಮ್ಮ ಅನುಕೂಲದಂತೆ ಸಿಗುವ ಹಣ್ಣುಗಳು, ಹಾಲು, ಮೊಸರು, ಜೇನುತುಪ್ಪ ನಿವೇದಿಸಬಹುದು. ಅನ್ನದ ಪಾಯಸವನ್ನು ಕೂಡಾ ಸಮರ್ಪಿಸಬಹುದು. ತುಳಸೀದಳದಿಂದ ಪೂಜಿಸಿದರೆ ನನಗೆ ಅತ್ಯಂತ ಪ್ರಿಯ. ವ್ರತಕಥೆಗಳು ಪೂರ್ತಿಯಾದಾಗ ಸಮರ್ಪಣೆಯಾದ ಪದಾರ್ಥಗಳನ್ನು ನೀವು ಪ್ರಸಾದವಾಗಿ ಸ್ವೀಕರಿಸಿ, ನಿಮ್ಮ ಬಂಧು-ಮಿತ್ರರಿಗೆಲ್ಲಾ ಹಂಚಬೇಕು.

ಶ್ರೀ ಕೃಷ್ಣ ವ್ರತವು ಪೂರ್ತಿಯಾದಾಗ ನೀವು ಅಥವಾ ನಿಮ್ಮ ಬಂಧು-ಮಿತ್ರರು ನನಗೆ ಪ್ರಿಯವಾದ ಭಜನೆ-ಕೀರ್ತನೆಗಳನ್ನು ಹಾಡಬಹುದು. ವಾದ್ಯಗೋಷ್ಠಿಯನ್ನು ಕೂಡಾ ಜರುಗಿಸಬಹುದು. ಇನ್ನೊಂದು ವಿಶೇಷವನ್ನು ಹೇಳುತ್ತಿದ್ದೇನೆ. ನೀವೆಲ್ಲರೆಂದರೆ ನನಗೆ ಬಹಳ ಪ್ರೀತಿ, ಅನುರಾಗ. ಈ ವ್ರತವನ್ನು ಎಲ್ಲಿ ಆಚರಿಸುತ್ತಾರೋ ನಾನು ಅಲ್ಲಿ ಬಾಲಕೃಷ್ಣನ ರೂಪದಲ್ಲಿ ಅದೃಶ್ಯವಾಗಿ ನಾಟ್ಯಮಾಡುತ್ತೇನೆ. ಬಹಳ ಸಂತೋಷದಿಂದ ಕೊಳಲಿನಧ್ವನಿಗೆ ನಾಟ್ಯವಾಡುತ್ತೇನೆ. ನನ್ನ ಗೆಜ್ಜೆಯನಾದ, ನನ್ನ ಕೊಳಲಿನ ಧ್ವನಿ, ನನ್ನ ಪ್ರಿಯಭಕ್ತರಿಗೆ ಕೇಳುತ್ತದೆ. ಯಾರು ಈ ಶ್ರೀ ಕೃಷ್ಣ ವ್ರತವನ್ನು ಅತ್ಯಂತ ಭಕ್ತಿ, ಶ್ರದ್ಧೆಯಿಂದ ಆಚರಿಸುತ್ತಾರೋ ಅಲ್ಲಿ ನನ್ನ ಪಾದದ ಮುದ್ರೆಗಳು ಕೂಡಾ ದರ್ಶನ ಕೊಡುತ್ತದೆ. ಈ ವ್ರತವು ನನಗೆಷ್ಟೋ ಪ್ರಿಯಕರವಾದದ್ದು. ಈ ವ್ರತವನ್ನು ಆಚರಿಸುತ್ತಿರುವವರೂ, ಈ ವ್ರತ ಕಥೆಗಳನ್ನು ಓದುವವರೂ, ಕೇಳುವವರೂ ಎಂದರೆ ನನಗೆಷ್ಟೋ ಅನುರಾಗ. ವ್ರತವನ್ನು ಆಚರಿಸುವ ಪ್ರದೇಶದಲ್ಲಿ ಆ ದಿನವಿಡೀ ನಾನು ಆಡುತ್ತಾ, ಹಾಡುತ್ತಾ, ಸಂತೋಷವಾಗಿ ತಿರುಗುತ್ತಿರುತ್ತೇನೆ ಎಂದು ಆ ಶ್ರೀ ಕೃಷ್ಣ ಭಗವಂತನು, ಈ ದಂಪತಿಗಳಿಗೆ ತಿಳಿಸಿದರು.

ಕಲಿಯುಗದಲ್ಲಿ, ಶ್ರೀ ಕೃಷ್ಣ ಭಗವಂತನ ಅನುಗ್ರಹವನ್ನು ಪಡೆದುಕೊಳ್ಳಲು ಈ ಶ್ರೀ ಕೃಷ್ಣ ವ್ರತವನ್ನು ಆಚರಿಸುವುದು ಅತ್ಯಂತ ಸುಲಭವಾದ ಮಾರ್ಗ. ಈ ವ್ರತವನ್ನು ಆಚರಿಸಿದ ಕೂಡಲೇ, ಬಹಳ ಶುಭಪ್ರದಗಳು ಜರುಗುತ್ತದೆಂದು ಸಾಕ್ಷಾತ್ ಶ್ರೀ ಕೃಷ್ಣ ಭಗವಂತನೇ ವಿಶ್ವಪತಿ-ರುಕ್ಮಿಣಿ ದಂಪತಿಗಳಿಗೆ ತಿಳಿಸಿದರು. ಸಮಯಸಿಕ್ಕಾಗಲ್ಲೆಲ್ಲಾ ಈ ವ್ರತವನ್ನು ಆಚರಿಸಿದರೆ ನಮ್ಮ ಜೀವನವು ಬಹಳ ಶುಭಪ್ರದವಾಗಿ ಮುಂದುವರಿಯುತ್ತದೆ. ಶ್ರೀ ಕೃಷ್ಣನ

ಅನುಗ್ರಹವನ್ನು ಪಡೆಯಲು ಅತಿ ಸುಲಭವಾದ ಈ ವ್ರತವನ್ನು ನಮಗೆ ಅನುಕೂಲವಾದಾಗಲೆಲ್ಲಾ ಆಚರಿಸಿ, ಆ ಗೋಕುಲನಂದನನ ಆಶೀರ್ವಾದವನ್ನು ಪಡೆಯಬಹುದು.

ಪ್ರಥಮ ಅಧ್ಯಾಯವು ಸಂಪೂರ್ಣವಾಯಿತು
ಗೋವಿಂದಾ... ಗೋಪಾಲಾ... ಗೊಕುಲನಂದನಾ...

************

ಎರಡನೇ ಅಧ್ಯಾಯ

## ವಲ್ಲಭದಾಸನ ಕಥೆ

ಪೂರ್ವಕಾಲದಲ್ಲಿ, ಮಥುರಾನಗರದಲ್ಲಿ ವಲ್ಲಭದಾಸನೆಂಬ ಶ್ರೀ ಕೃಷ್ಣನ ಭಕ್ತನು ವಾಸಿಸುತ್ತಿದ್ದನು. ಆತನಿಗೆ ಶ್ರೀ ಕೃಷ್ಣ ಭಗವಂತನೆಂದರೆ ಬಹಳ ಭಕ್ತಿ. ಯಾವಾಗಲೂ ಆ ಗೋಕುಲನಂದನನ್ನೇ ನೆನೆಯುತ್ತಾ ಕಾಲ ಕಳೆಯುತ್ತಿದ್ದನು. ತನಗೆ ಸಂತೋಷವಾಗಲೀ, ಕಷ್ಟವಾಗಲೀ ಬಂದಾಗ ಆ ದೇವರಿಗೆ ಹೇಳಿಕೊಳ್ಳುತ್ತಿದ್ದನು. ವಲ್ಲಭದಾಸನು ಪೂರ್ತಿ ಭಕ್ತಿ ಪರವಶದಲ್ಲಿ ಮೈಮರೆಯುತ್ತಾ, ಒಮ್ಮೊಮ್ಮೆ ಆ ಗೋಪಾಲಕೃಷ್ಣನೇ ತನ್ನೆದುರಲ್ಲಿದ್ದ ಹಾಗೆ ಭಾವಿಸಿ ಮಾತಾಡುತ್ತಿದ್ದನು. ಇವನ ಅನನ್ಯ ಭಕ್ತಿಯನ್ನು ನೋಡಿ, ಅಕ್ಕ-ಪಕ್ಕದವರೆಲ್ಲ ತುಂಬಾ ಆಶ್ಚರ್ಯಪಡುತ್ತಿದ್ದರು.

ವಲ್ಲಭದಾಸನು ಪ್ರತಿದಿನ ಮುಂಜಾನೆ ಮಥುರದಲ್ಲಿರುವ ಶ್ರೀ ಕೃಷ್ಣ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಮಾಡುತ್ತಿದ್ದನು. ಆ ದೇವರ ದಿವ್ಯಮಂಗಳ ಸ್ವರೂಪವನ್ನು ನೋಡಿ ತುಂಬಾ ಸಂತೋಷಪಡುತ್ತಿದ್ದನು. ಈ ಸೃಷ್ಟಿಯಲ್ಲಿರುವ ಅಂದ-ಚೆಂದವೆಲ್ಲಾ ಆ ಗೋಪಾಲಕೃಷ್ಣನದ್ದೇ! ಎಷ್ಟೋ ಪ್ರೀತಿ ತುಂಬಿಕೊಂಡಿರುವ ಆ ಕಣ್ಣುಗಳು, ಜಗತ್ತನ್ನೆಲ್ಲಾ ಸಂಮ್ಮೋಹನ ಮಾಡುವ ಕೊಳಲಿನಧ್ವನಿ.... ತಲೆಯ ಮೇಲಿರುವ ನವಿಲಿನ ಗರಿ, ಪ್ರಪಂಚಕ್ಕೆಲ್ಲಾ ರಕ್ಷಾ ಕವಚದಂತಿರುವ ತುಟಿಯ ಮೇಲಿರುವ ಸುಂದರವಾದ ಕಿರುನಗೆ. ಆ ದೇವರ ಮುಗ್ಧ ಮನೋಹರವಾದ ರೂಪವನ್ನು ನೋಡುತ್ತಾ ವಲ್ಲಭದಾಸನು ದೇವಸ್ಥಾನದಲ್ಲೇ ಹೆಚ್ಚು ಸಮಯವನ್ನು ಕಳೆಯುತ್ತಿದ್ದನು. ಆ ದೇವರೇ ತನ್ನ ಪ್ರಪಂಚವೆಂದು ಭಾವಿಸುತ್ತಿದ್ದನು.

ಆ ದಿನಗಳಲ್ಲಿ, ಶ್ರೀ ಕೃಷ್ಣ ದೇವಸ್ಥಾನದಲ್ಲಿ ಪ್ರತಿದಿನ ಯಾರೋ ಒಬ್ಬ ಭಕ್ತನು, ದೇವರಿಗೆ ನೈವೇದ್ಯ ಸಮರ್ಪಣೆಯಾಗುವ ಸಮಯದಲ್ಲಿ ಕೊಳಲನ್ನು ನುಡಿಸುತ್ತಿದ್ದನು. ಸ್ವಲ್ಪ ಸಮಯ ಕೊಳಲಿನ ಧ್ವನಿಯಿಂದ ದೇವರನ್ನು ಸಂತೋಷಪಡಿಸುತ್ತಿದ್ದನು. ವಲ್ಲಭದಾಸನು ಆ ಕೊಳಲಿನ ಧ್ವನಿಯನ್ನು ಕೇಳುತ್ತಾ ಆನಂದ ಪರವಶನಾಗುತ್ತಿದ್ದನು. ಆ ದಿವ್ಯಧ್ವನಿಯನ್ನು ಕೆಳುತ್ತಾ, ಆ ದೇವರತ್ತಾ ತನ್ಮಯನಾಗಿ ನೋಡುತ್ತಾ ಮೈಮರೆಯುತ್ತಿದ್ದನು. ದಿನಾ ದೇವಸ್ಥಾನಕ್ಕೆ ಬರುವ ಭಕ್ತರೆಲ್ಲರಿಗೂ ವಲ್ಲಭದಾಸು ಸುಪರಿಚಿತನೇ. ಕ್ರಮ ತಪ್ಪದೇ ಪ್ರತಿದಿನ ದೇವಾಸ್ಥಾನಕ್ಕೆ ಬಂದು ಆ ಗೋಪಾಲನ ಸೇವೆ ಮಾಡುವ ವಲ್ಲಭದಾಸನ ಭಕ್ತಿಗೆ ಎಲ್ಲರು ಬಹಳ ಸಂತೋಷಪಡುತ್ತಿದ್ದರು.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದು ದಿನ ರಾತ್ರಿ ವಲ್ಲಭದಾಸನಿಗೆ ತುಂಬಾ ಜ್ವರ ಬಂತು. ಮರುದಿನ ಬೆಳಿಗ್ಗೆ ಸ್ವಲ್ಪ ಕಡಿಮೆಯಾದರೂ, ವಿಪರೀತ ಆಯಾಸದಿಂದ ಹೆಜ್ಜೆ ಎತ್ತಿ ಹೆಜ್ಜೆ ಮುಂದಿಡಲಾಗಲ್ಲಿಲ್ಲ. ಕೃಷ್ಣ ಕೃಷ್ಣಾ! ತುಂಬಾ ನಿತ್ರಾಣವಾಗಿದೆ. ಇವತ್ತು ಆ ದೇವರ ದರ್ಶನ ಮಾಡಲು, ಕೊಳಲಿನ ಧ್ವನಿಯನ್ನು ಕೇಳಲು ಸಾಧ್ಯವಿಲ್ಲವೇ ಎಂದು ನೋಯುತ್ತಾ ಮಂಚದ ಮೇಲೆಯೇ ಮಲಗಿದ್ದಾನೆ. ಅಷ್ಟರಲ್ಲೇ ಒಬ್ಬ ಚಿಕ್ಕಬಾಲಕನು ಘಲ್ಲು ಘಲ್ಲು ಗೆಜ್ಜೆಯ ಶಬ್ದಮಾಡುತ್ತಾ, ಓಡುತ್ತಾ ಮನೆಯೊಳಗೆ ಬಂದನು. ವಲ್ಲಭದಾಸನ ಹತ್ತಿರ ಬಂದು ಏನಜ್ಜ! ಗಾಬರಿಯಾಗಿದ್ದಿ? ಎಂದು ಕೇಳಿದನು. ಆ ಬಾಲಕನ ಕಿರುನಗೆ ನೋಡಿದ ಕೂಡಲೇ ವಲ್ಲಭದಾಸನ ಆಯಾಸವು ತಗ್ಗಿತು. ಶರೀರದಲ್ಲಿ ಸ್ವಲ್ಪ ಉತ್ಸಾಹ ತುಂಬಿತು. ಆ ಬಾಲಕನನ್ನು ನೋಡಿ ತುಂಬಾ ಸಂತೋಷಪಡುತ್ತಾ, ಎಲ್ಲಿಂದ ಬಂದೆ ಮಗು! ಎಂದು ಕೇಳಿದನು. ಆಗ ಆ ಬಾಲಕನು ಈ ಊರೆಲ್ಲಾ ನನ್ನದೇ ಎಂದು ಮುಗುಳು ನಗುತ್ತಾ ಹೇಳಿದನು. ತನ್ನ ಕೈಯಲ್ಲಿದ್ದ ಬೆಣ್ಣೆಯನ್ನು ಸ್ವಲ್ಪ ವಲ್ಲಭದಾಸನಿಗೆ ಕೊಟ್ಟನು. ಶ್ರೀ ಕೃಷ್ಣ ದೇವಸ್ಥಾನದಿಂದ ತಂದೆನು ಎಂದನು. ವಲ್ಲಭದಾಸನು ಸಂತೋಷದಿಂದ, ಭಕ್ತಿಯಿಂದ ಬಾಯಲ್ಲಿ ಹಾಕಿದ ಕೂಡಲೇ, ಬಹಳ ಉತ್ಸಾಹ ಬಂತು. ಅಷ್ಟರಲ್ಲೇ ಆ ಬಾಲಕನು ವಲ್ಲಭದಾಸನ ಮಂಚದ ಮೇಲೆ ಕುಳಿತುಕೊಂಡು ತನ್ನೊಟ್ಟಿಗೆ ತಂದ್ದಿದ್ದ ಕೊಳಲನ್ನು ಮಧುರವಾಗಿ ನುಡಿಸಿದನು. 5 ನಿಮಿಷ ಕೊಳಲಿನ ಧ್ವನಿಯನ್ನು ಆಲಿಸಿದ ವಲ್ಲಭದಾಸನಿಗೆ ಹಾಗೇ ನಿದ್ರೆಬಂತು. ನೆಮ್ಮದಿಯಾಗಿ ಕಣ್ಣುಗಳನ್ನು ಮುಚ್ಚಿ ಗಾಢನಿದ್ರೆಗೆ ಜಾರಿದನು.

ಒಂದು ಗಂಟೆಯ ನಂತರ, ಎಚ್ಚರನಾದ ವಲ್ಲಭದಾಸನಿಗೆ ಆ ಬಾಲಕನು ಕಾಣಲಿಲ್ಲ. ಇಷ್ಟರಲ್ಲೇ ಪಕ್ಕದಮನೆಯ ಕೇಶೋಭಾಯಿ ವಲ್ಲಭದಾಸನ ಮನೆಗೆ ಬಂದು ಏನು ಸ್ವಾಮಿ! ಈ ದಿನ ದೇವಸ್ಥಾನಕ್ಕೆ ಬರಲ್ಲಿಲ್ಲಲ್ವಾ? ಎಂದನು. ವಲ್ಲಭದಾಸನು ತನಗೆ ಜ್ವರ ಬಂದಿದ್ದನ್ನು ತಿಳಿಸಿದನು. ಅಷ್ಟರಲ್ಲೇ ಕೇಶೋಭಾಯಿ, ಆತನ ಮಂಚದ ಪಕ್ಕದಲ್ಲಿದ್ದ ಚಿಕ್ಕ ಮರದಮೇಜಿನ ಮೇಲೆ ಫಳ ಫಳ ಹೊಳೆಯುತ್ತಿರುವ ಕೊಳಲನ್ನು ನೋಡಿದನು. ಕೂಡಲೇ ಅವನು ವಲ್ಲಭದಾಸನೊಟ್ಟಿಗೆ ಹೀಗೆ ಹೇಳಿದನು. ಓ ಸ್ವಾಮಿ! ಈವತ್ತು ದೇವಸ್ಥಾನಕ್ಕೆ ಹೋದಾಗ, ಅಲ್ಲಿ ಎಲ್ಲರೂ ತುಂಬಾ ಗಾಬರಿಯಾಗಿದ್ದರು. ದೇವರ ಕೈಯಲ್ಲಿರುವ ದಿವ್ಯಕೊಳಲು ಮಾಯವಾಗಿತ್ತು. ಹೇಗೆ, ಯಾರು ಕದ್ದರೆಂದು ಎಲ್ಲರೂ ಗಾಬರಿಯದಲ್ಲಿದ್ದರು. ಎಷ್ಟು ಹುಡುಕಿದರೂ ಎಲ್ಲೂ ಕಾಣಲಿಲ್ಲ. ಇದೋ ಇಲ್ಲಿ ನೋಡು ನಿನ್ನ ಹತ್ತಿರವೇ ಇದೆ. ನೀನು ಬಹಳ ಪುಣ್ಯ ಮಾಡಿಕೊಂಡಿದ್ದಿ. ಆ ಗೋಪಾಲನೇ ಸ್ವಯಂ ನಿನ್ನ ಮನೆಗೆ ಬಂದು ಕೊಳಲಿನ ಧ್ವನಿಯನ್ನು ಕೇಳಿಸಿದ್ದಾನೆ ಎಂದು ಹೇಳಿದನು.

ಸಾಕ್ಷಾತ್ ಆ ಬಾಲಕೃಷ್ಣನು ತನ್ನ ಹತ್ತಿರ ಬಂದು ತನ್ನ ಪ್ರಸಾದವನ್ನು ಕೊಟ್ಟು ಕೊಳಲಿನ ಧ್ವನಿಯನ್ನು ಕೇಳಿಸಿ ಮತ್ತೆ ಹೊರಟನೆಂದು ತಿಳಿದ ವಲ್ಲಭದಾಸನಿಗಾದ ಆನಂದಕ್ಕೆ ಮಿತಿಯೇ ಇಲ್ಲ. ಆ ದೇವರ ಭಕ್ತವಾತ್ಸಲ್ಯಕ್ಕೆ ತುಂಬಾ ಸಂತೋಷಪಟ್ಟನು. ಈಗ ವಲ್ಲಭದಾಸ, ಕೇಶೋಭಾಯಿ ಇಬ್ಬರೂ ಕೂಡಿ ಆ ಕೊಳಲನ್ನು ತೆಗೆದುಕೊಂಡು ಶ್ರೀ ಕೃಷ್ಣ ದೇವಸ್ಥಾನಕ್ಕೆ ಹೋಗಿ ಜರುಗಿದ ವಿಷಯವನ್ನೆಲ್ಲಾ ವಿವರಿಸಿದರು. ಅಲ್ಲಿದ್ದವರೆಲ್ಲಾ ಆ ಶ್ರೀ ಕೃಷ್ಣ ಪರಮಾತ್ಮನು ವಲ್ಲಭದಾಸನ ಮೇಲೆ ತೋರಿದ ಪ್ರೇಮ, ಅನುರಾಗಕ್ಕೆ ತುಂಬಾ ಸಂತೋಷಪಟ್ಟರು. ಅಂತಹ ದೇವರ ಪ್ರಿಯಭಕ್ತನು ತಮ್ಮ ನಗರ ಮಥುರದಲ್ಲಿರುವುದಕ್ಕೆ ಆನಂದಿಸಿದರು.

ಶ್ರೀ ಕೃಷ್ಣ ದೇವರಿಗೆ ತನ್ನ ಭಕ್ತರೆಂದರೆ ಅತ್ಯಂತ ಪ್ರೇಮ, ಅನಂತ ಅನುರಾಗ. ತನ್ನನ್ನೇ ಸರ್ವಸ್ವವೆಂದು ಭಾವಿಸುತ್ತಾ ಜೀವಿಸುತ್ತಿರುವವರಿಗೆ ಎಲ್ಲಾ ಕಾಲದಲ್ಲೂ ಯಾವಾಗಲೂ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುತ್ತಾನೆ. ಗೋವಿಂದಾ ಎಂದು ಭಕ್ತಿಯಿಂದ ಕರೆದರೆ ಸಾಕು ವೇಗವಾಗಿ ಓಡಿಬಂದು, ನಮ್ಮನ್ನು ಅಪ್ಪಿಕೊಳ್ಳುತ್ತಾನೆ. ನಮ್ಮನ್ನು ಬಹಳ ಆನಂದದಲ್ಲಿ ಮುಳುಗಿಸುತ್ತಾನೆ.

ಎರಡನೇ ಅಧ್ಯಾಯವು ಸಂಪೂರ್ಣವಾಯಿತು

ಗೋವಿಂದಾ... ಗೋಪಾಲಾ... ಗೊಕುಲನಂದನಾ...

************

## ಮೂರನೇ ಅಧ್ಯಾಯ
## **ಕೃಷ್ಣನ್ ದಂಪತಿಗಳ ಕಥೆ**

ಶ್ರೀ ಕೃಷ್ಣನು ಭಕ್ತಾಧೀನನು, ಭಕ್ತವತ್ಸಲನು. ಆ ದೇವರಿಗೆ, ತನ್ನ ಭಕ್ತರೆಂದರೆ ಪಂಚಪ್ರಾಣ. ಯಾರಾದರೂ ತನ್ನನ್ನು ತೆಗಳಿದ್ದರೂ ಸಹಿಸುತ್ತಾನೆ ಆದರೆ ತನ್ನ ಭಕ್ತರನ್ನು ಮಾತಿನ್ನಲ್ಲಾಗಲೀ, ಕಾರ್ಯಗಲ್ಲಾಗಲೀ ನೋವುಂಟು ಮಾಡಿದರೆ ಅವರನ್ನು ಯಾವ ಕಾರಣಕ್ಕೂ ಉಪೇಕ್ಷಿಸುವುದಿಲ್ಲ, ಕಠಿಣವಾಗಿ ಶಿಕ್ಷಿಸುತ್ತಾನೆ. ತನ್ನನ್ನು ನಂಬಿ ಶರಣಾಗತರಾದವರನ್ನು ಮಾತ್ರ ನಿತ್ಯ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುತ್ತಾನೆ.

ಪೂರ್ವಕಾಲದಲ್ಲಿ, ಗುರುವಾಯೂರು ಪಟ್ಟಣದ ಸರೋವರದ ಆಚೆ ದಡದಲ್ಲಿ ಕೃಷ್ಣನ್ - ರಾಧ ಎನ್ನುವ ದಂಪತಿಗಳು ವಾಸಿಸುತ್ತಿದ್ದರು. ಇವರಿಬ್ಬರೂ, ಒಳ್ಳೆಯ ಶ್ರೀ ಕೃಷ್ಣ ಭಕ್ತರು. ಮುಖ್ಯವಾಗಿ ರಾಧಗೇ ಶ್ರೀ ಕೃಷ್ಣನೆಂದರೆ ತುಂಬಾ ಪ್ರೀತಿ. ಯಾವಾಗಲೂ ಆ ಗೋಪಾಲನನ್ನೇ ನೆನೆಯುತ್ತಾ ಕಾಲವನ್ನು ಕಳೆಯುತ್ತಿದ್ದಳು. ಆ ದಂಪತಿಗಳು ಪ್ರತಿದಿನ ಬೆಳಿಗ್ಗೆ ಶ್ರೀ ಕೃಷ್ಣ ದೇವಸ್ಥಾನಕ್ಕೆ ಹೋಗಿ ಶ್ರೀ ಕೃಷ್ಣನ ದರ್ಶನವನ್ನು ಮಾಡಿಕೊಂಡು ಬರುತ್ತಿದ್ದರು. ಇವರು ಅತ್ಯಂತ ಸತ್ಪ್ರವರ್ತಕರಾಗಿ ಜೀವಿಸುತ್ತಿದ್ದರೂ, ಪೂರ್ವಜನ್ಮದ ಕರ್ಮದ ಫಲವಾಗಿ ಇವರಿಗೆ ಸಂತಾನಭಾಗ್ಯ ದೊರೆಯಲಿಲ್ಲ. ಆದ್ದರಿಂದ, ತಮ್ಮ ಸುತ್ತ-ಮುತ್ತಾ ಮನೆಯಲ್ಲಿರುವ ಮಕ್ಕಳೆಲ್ಲರನ್ನು ತಮ್ಮ ಸಂತಾನವೆಂದು ಭಾವಿಸುತ್ತಿದ್ದರು. ಮಕ್ಕಳಿಗೆ ಎಷ್ಟೋ ತಿಂಡಿ-ತಿನುಸುಗಳನ್ನು ತೆಗೆದುಕೊಂಡು ಕೊಡುತ್ತಿದ್ದರು. ಆಟದ ಸಾಮಾನುಗಳನ್ನು ಕೊಡುತ್ತಿದ್ದರು. ಅವರನ್ನು ನೋಡಿ ತುಂಬಾ ಖುಷಿಪಡುತ್ತಿದ್ದರು. ಹೀಗೆ ಇವರಿಬ್ಬರು ಅರವತ್ತು ಸಂವತ್ಸರಗಳನ್ನು ದಾಟಿದರು.

ಪ್ರತಿವರ್ಷ ರಾಧೆಗೆ ಶ್ರೀ ಕೃಷ್ಣಾಷ್ಟಮಿಯ ದಿನ ಒಂದು ಚಿಕ್ಕಹುಡುಗನಿಗೆ ಬಾಲಕೃಷ್ಣನ ಅಲಂಕಾರವನ್ನು ಮಾಡಿ ಊಟ ಬಡಿಸಿ, ಹೊಸಬಟ್ಟೆ ಕೊಟ್ಟು ಕಳಿಸುವ ಅಭ್ಯಾಸವಿತ್ತು. ಆ ಚಿಕ್ಕಹುಡುಗನಿಗೆ ಎಷ್ಟೋ ಉಡುಗೊರೆಗಳನ್ನು ಕೊಡುತ್ತಿದ್ದಳು. ರಾಧೆಗೆ ಇದ್ದ ಈ ಅಭ್ಯಾಸ ನೋಡಿ ಅಕ್ಕ-ಪಕ್ಕದವರು ತುಂಬಾ ಸಂತೋಷಪಟ್ಟರು. ಶ್ರೀ ಕೃಷ್ಣಾಷ್ಟಮಿ ಬರುತ್ತಿದೆ ಅಂದ್ರೆ ರಾಧೆಗೇ ವಾರದ ಮೊದಲೇ ಹಬ್ಬದ ಹಾಗೆ ಇರುತ್ತಿತ್ತು. ಮನೆಯನ್ನೆಲ್ಲಾ ವಿವಿಧ ಹೂವುಗಳಿಂದ ಅಲಂಕರಿಸುತ್ತಿದ್ದಳು. ಅಕ್ಕ-ಪಕ್ಕದ ಮಕ್ಕಳಿಗಾಗಿ ಬೇರೆ ಬೇರೆ ತಿಂಡಿ-ತಿನುಸುಗಳನ್ನು ತಯಾರಿಸುತ್ತಿದ್ದಳು.

ಪ್ರತೀ ವರುಷದ ಹಾಗೆ, ಆ ವರ್ಷ ಕೂಡಾ ಶ್ರೀ ಕೃಷ್ಣಾಷ್ಟಮಿ ಬಂತು. ಮುಂದಿನ ದಿವಸವೇ ಹತ್ತಿರದ ಮನೆಯಲ್ಲಿಯ ಮುಕುಂದನ್ ಹೆಸರಿನ ಬಾಲಕನನ್ನು ಮರುದಿನ ಬೆಳ್ಳಿಗ್ಗೆ ಶ್ರೀ ಕೃಷ್ಣ ಅಲಂಕಾರ ಮಾಡಲು ಬರಲು ಹೇಳಿದಳು. ಮರುದಿನ ಬೆಳ್ಳಿಗ್ಗೆ ಎದ್ದಕೂಡಲೇ ಬೇಗ ಬೇಗ ಅಡಿಗೆಮನೆ ಕೆಲಸಗಳನ್ನು ಮಾಡಿದಳು. ಎಷ್ಟೋ ವಿವಿಧ ಹಣ್ಣುಗಳನ್ನು ತೆಗೆದುಕೊಂಡು ಬಂದಳು. ಮುಕುಂದನ್ ಆಡುತ್ತಾ, ಹಾಡುತ್ತಾ 8 ಗಂಟೆಗೆಲ್ಲಾ ಮನೆಗೆ ಬಂದನು. ಆ ಬಾಲಕನಿಗೆ ಚೆನ್ನಾಗಿ ಹೊಸಬಟ್ಟೆ ತೊಡಿಸಿ, ಅಂದವಾಗಿ ಅಲಂಕರಿಸಿ ಬೇರೆ ಬೇರೆ ರೀತಿಯ ಆಟಗಳನ್ನು ಆಡಿದಳು. ಮುಕುಂದನ್ ಹಸಿವಾಗುತ್ತದೆಂದು ಹೇಳಿದರೆ ಹುಡುಗನನ್ನು ಕುಳ್ಳಿರಿಸಿ ಊಟ ಬಡಿಸಿದಳು. ಮುಕುಂದನ್ ಬಡಿಸಿದ ಪದಾರ್ಥಗಳನ್ನು ಸಂತೋಷದಿಂದ ತಿನ್ನುತ್ತಿದ್ದರೆ ರಾಧ ಖುಷಿಯಿಂದ ಎದುರಲ್ಲಿ ಕುಳಿತುಕೊಂಡಳು. ಅವರಿಬ್ಬರನ್ನು ಹಾಗೇ ನೋಡುತ್ತಿದ್ದ ಕೃಷ್ಣನ್ ಗೆ ತುಂಬಾ ಖುಷಿಯಾಯಿತು.

ಅಷ್ಟರಲ್ಲಿ ಆ ಬಾಲಕನು, ಅಮ್ಮಾ, ನನಗೆ ಮಾವಿನಹಣ್ಣು ಬೇಕು ಎಂದನು. ರಾಧಾ ಅವನಿಗೆ ಮಗು! ಈಗ ಮಾವಿನಹಣ್ಣು ಸಿಗುವುದಿಲ್ಲ, ಅಲ್ವಾ? ನಿನಗೆ ಒಳ್ಳೆಯ ಬಾಳೆಹಣ್ಣು, ಪೇರಳೆಹಣ್ಣು ತರುತ್ತೆನೆ ಆಯಿತಾ ಎಂದಳು. ಆಗ ಮುಕುಂದನ್ ಅಮ್ಮಾ! ನೀವು ಮಾವಿನಹಣ್ಣನ್ನು ತಂದಿದ್ದೀರಿ. ನನಗೆ ಅಸತ್ಯ ಹೇಳುತ್ತಿದ್ದೀರಿ ಎಂದನು. ರಾಧಾ ನಗುತಾ ಇಲ್ಲ ಮಗು! ತರಲಿಲ್ಲ. ಮಾವಿನಹಣ್ಣಿನ ಕಾಲ ಹೋಗಿದೆ, ಅಲ್ವಾ? ಎಂದು ಹೇಳಿದಳು. ಮುಕುಂದನ್ ರಾಧೆಗೆ ಇಲ್ಲಮ್ಮಾ, ಬೇಕಾದರೆ ಹೋಗಿ ಹಣ್ಣಿನ ಬುಟ್ಟಿಯನ್ನು ನೋಡು, ಮಾವಿನಹಣ್ಣುಗಳು ಇದೆ ಎಂದು ಹೇಳಿದನು. ಆಗ ರಾಧ ಎದ್ದು ಹಣ್ಣಿನ ಬುಟ್ಟಿಯನ್ನು ನೋಡಿದರೆ ಆಶ್ಚರ್ಯಕರವಾಗಿ ಅದರಲ್ಲಿ ಎರಡು ಮಾವಿನಹಣ್ಣು ಕಾಣಿಸಿತು. ರಾಧೆ ತುಂಬಾ ಆಶ್ಚರ್ಯದಿಂದ ಆ ಎರಡು ಹಣ್ಣುಗಳನ್ನು ತೆಗೆದುಕೊಂಡು ಮುಕುಂದನ್ ಗೆ ಬಡಿಸಿದಳು. ಆಗ ಮುಕುಂದನ್, ನೋಡಿದೀಯಾ ಅಮ್ಮಾ! ಮಾವಿನಹಣ್ಣು ಇದೆ ಅಲ್ವಾ? ಎಂದು ಅದನ್ನು ತೆಗೆದುಕೊಂಡು ತುಂಬಾ ಸಂತೋಷದಿಂದ ತಿಂದನು. ನಂತರ, ಸ್ವಲ್ಪಹೊತ್ತು ಆಟವಾಡಿ ಮನೆಗೆ ಹೋಗುತ್ತೇನೆಂದು ಹೇಳಿ ಹೊರಟು ಹೋದನು.

ಇಷ್ಟರಲ್ಲೇ ಮಧ್ಯಾಹ್ನ 4 ಗಂಟೆಯ ಸಮಯವಾಯಿತು. ಯಾರೋ ಬಾಗಿಲು ಬಡಿದರೆ ರಾಧ ಹೋಗಿ ಬಾಗಿಲು ತೆರೆದಳು. ಎದುರಲ್ಲಿ ಮುಕುಂದನ್ ತಾಯಿ ನಿಂತಿದ್ದಳು, ಅವಳು ರಾಧೆಗೆ ಹೀಗೆ ಹೇಳಿದಳು: ರಾಧಾ, ಏನೂ ತಿಳಿದುಕೊಳ್ಳಬೇಡ. ಬೆಳಿಗ್ಗೆ ಮುಕುಂದನ್ ನಿಮ್ಮ ಮನೆಗೆ ಬರಲಾಗಲಿಲ್ಲ. ಅವನಿಗೆ ರಾತ್ರಿಯೆಲ್ಲಾ ಒಂದೇ ಜ್ವರ ಎಂದು ಹೇಳಿದಳು. ಆಗ ರಾಧೆಗೆ ಆಶ್ಚರ್ಯವಾಯಿತು. ಬೆಳ್ಳಿಗ್ಗೆ ಮುಕುಂದನ್ ಬಂದು ಊಟ ಮಾಡುವುದು, ಮಾವಿನಹಣ್ಣುಗಳನ್ನು ಕೇಳಿ ತಿನ್ನುವುದೂ ಎಲ್ಲಾ ಹೇಳಿದಳು. ಅವರಿಬ್ಬರ ಆಶ್ಚರ್ಯಕ್ಕೆ ಕೊನೆಯಿಲ್ಲ. ಆಗ ಅವರಿಗೆ ಜರುಗಿದ ವಿಷಯ ಅರ್ಥವಾಯಿತು. ಬೆಳಿಗ್ಗೆ ಕೃಷ್ಣನ್ - ರಾಧ ದಂಪತಿಗಳ ಮನೆಗೆ ಬಂದದ್ದು ಸಾಕ್ಷಾತ್ ಬಾಲಕೃಷ್ಣನೇ ಎಂದು ತಿಳಿದು ಆ ದಂಪತಿಗಳು ಬಹಳ ಆನಂದಪಟ್ಟರು. ಮುಕುಂದನ್ ತಾಯಿ ಕೂಡಾ ಈ ದಂಪತಿಗಳ ಮೇಲೆ ಬಾಲಕೃಷ್ಣನು ತೋರಿಸಿದ ಅನುಗ್ರಹಕ್ಕೆ ತುಂಬಾ ಸಂತೋಷಪಟ್ಟಳು. ಆ ದಂಪತಿಗಳಿಬ್ಬರೂ ಸಾಯಂಕಾಲ ದೇವಸ್ಥಾನಕ್ಕೆ ಹೋದರು.

ಅಲ್ಲಿಗೆ ಹೋಗುವಾಗ, ಅಲ್ಲಿ ಭಕ್ತರೆಲ್ಲರೂ ಏನೋ ಚರ್ಚಿಸುತ್ತಿರುವುದು ಕಾಣಿಸಿತು. ವಿಷಯ ನೋಡಿದರೆ, ಆ ದಿನ ಮಧ್ಯಾಹ್ನದಿಂದ ಗರ್ಭಾಲಯದಿಂದ ಮಾವಿನಹಣ್ಣಿನ ಪರಿಮಳ

ಬರುತ್ತಿದೆ. ಈ ಕಾಲದಲ್ಲಿ ಮಾವಿನಹಣ್ಣುಗಳು ಸಿಗುವುದಿಲ್ಲ ಆದರೆ, ಈ ಮಾವಿನಹಣ್ಣಿನ ಪರಿಮಳ ಹೇಗೆ ಬರುತ್ತಿದೆಯೋ ಯಾರಿಗೂ ಅರ್ಥವಾಗಲಿಲ್ಲ. ಈ ಸಂಗತಿಯನ್ನು ಕೇಳಿದ ಕೃಷ್ಣನ್ - ರಾಧ ದಂಪತಿಗಳಿಗೆ ಸಂತೋಷದಿಂದ ಕಣ್ಣಲ್ಲಿ ನೀರು ಸುರಿಯಿತು. ಬೆಳಿಗ್ಗೆ ಬಾಲಕೃಷ್ಣನೇ ತಮ್ಮ ಮನೆಗೆ ಬಂದು, ಮಾವಿನಹಣ್ಣುಗಳನ್ನು ಬಡಿಸಿಕೊಂಡು ತಿಂದಿರುವ ಈ ವಿಷಯವನ್ನು ಅಲ್ಲಿದ್ದ ಭಕ್ತರೆಲ್ಲರಿಗೂ ಹೇಳಿದರು. ದೇವಸ್ಥಾನದಲ್ಲಿ ಮಾವಿನಹಣ್ಣಿನ ಪರಿಮಳ ಬರುತ್ತಿರುವ ಕಾರಣ ಭಕ್ತರೆಲ್ಲರಿಗೂ ಅರ್ಥವಾಯಿತು. ಕೃಷ್ಣನ್ - ರಾಧ ದಂಪತಿಗಳ ಭಕ್ತಿಗೆ ಎಲ್ಲರೂ ತುಂಬಾ ಸಂತೋಷಪಟ್ಟರು.

ಶ್ರೀ ಕೃಷ್ಣ ದೇವರಿಗೆ ತನ್ನ ಭಕ್ತರೆಂದರೆ ಬಹಳ ವಾತ್ಸಲ್ಯ ಮತ್ತು ತುಂಬಾ ಅನುರಾಗ. ಎಲ್ಲಾ ಸಮಯದಲ್ಲೂ ಆ ದೇವರನ್ನೇ ಸ್ಮರಿಸುವವರ ಯೋಗಕ್ಷೇಮವನ್ನು ಅವನೇ ವಹಿಸಿಕೊಳ್ಳುತ್ತಾನೆ. ನಾವು ಮಾಡಬೇಕಾದದಿಷ್ಟೇ. ಸಂಪೂರ್ಣ ಅಹಂಕಾರವನ್ನು ತೊರೆದು, ನಮ್ಮ ಮನಸ್ಸನ್ನು ಯಾವಾಗಲೂ ಆ ದೇವರ ಮೇಲೆ ಒಪ್ಪಿಸುವುದು. ನಮಗೆ ಬೇಕಾದದ್ದೆಲ್ಲಾ ಆ ದೇವರು ಅನುಕೂಲಮಾಡಿಕೊಡುತ್ತಾನೆ. ಆ ಗೋಪಾಲಕೃಷ್ಣನನ್ನು ನಂಬಿ ಶರಣಾಗತರಾದವರ ಜೀವನವು ಯಾವಾಗಲೂ ಶುಭಪ್ರದವಾಗಿ ಮುಂದುವರಿಯುತ್ತದೆ.

ಮೂರನೇ ಅಧ್ಯಾಯವು ಸಂಪೂರ್ಣವಾಯಿತು
ಗೋವಿಂದಾ... ಗೋಪಾಲಾ... ಗೊಕುಲನಂದನಾ...

**********

ನಾಲ್ಕನೇ ಅಧ್ಯಾಯ

## ರಂಗದಾಸನ ಕಥೆ

ಶ್ರೀ ಕೃಷ್ಣನು ಅತ್ಯಂತ ದಯಾಮಯನು. ಈ ಸಮಸ್ತ ಸೃಷ್ಟಿಯನ್ನು ಆ ಗೋಕುಲಾನಂದನನೇ ವ್ಯಾಪಿಸಿರುತ್ತಾನೆ. ಈ ಸಮಸ್ತ ಸೃಷ್ಟಿಯೆಲ್ಲಾ ಆ ಗೋವಿಂದನ ಪ್ರತಿರೂಪವೇ. ಯಾರು ಪ್ರತಿಜೀವಿಯಲ್ಲಿ ಶ್ರೀ ಕೃಷ್ಣ ಪರಮಾತ್ಮನನ್ನು ಕಾಣುತ್ತಾರೋ ಅವರ ಜೀವನವು ಧನ್ಯ. ಒಂದುಬಾರಿ ಗಟ್ಟಿಯಾಗಿ ಮನಸ್ಫೂರ್ತಿಯಾಗಿ ಆ ದೇವರನ್ನು ಸ್ಮರಿಸುತ್ತಾ 'ಗೋವಿಂದಾ' ಎಂದು ಕರೆದರೆ ಸಾಕು, ತಕ್ಷಣ ಮೊರೆಕೇಳಿ ನಮ್ಮ ಮುಂದೆ ಪ್ರತ್ಯಕ್ಷನಾಗುತ್ತಾನೆ. ಅಂತಹ ಪ್ರೇಮಮೂರ್ತಿ ಆ ಪುರುಷೋತ್ತಮನು.

ಪೂರ್ವಕಾಲದಲ್ಲಿ ಉಡುಪಿ ಪಟ್ಟಣದಲ್ಲಿ, ರಂಗದಾಸನೆಂಬ ಭಕ್ತನು ಇದ್ದನು. ಅವನಿಗೆ ಶ್ರೀ ಕೃಷ್ಣನೇ ಸರ್ವಸ್ವ. ದಿನಾಲು ಪಟ್ಟಣದಲ್ಲಿರುವ ಶ್ರೀ ಕೃಷ್ಣ ದೇವಸ್ಥಾನಕ್ಕೆ ಹೋಗಿ ಆ ದೇವರನ್ನು ಮನಸ್ಫೂರ್ತಿಯಾಗಿ ದರ್ಶಿಸುತ್ತಿದ್ದನು. ಪ್ರತಿಕ್ಷಣವೂ ಆ ದೇವರ ಮೇಲೆಯೇ ಅವನ ಧ್ಯಾನ. ಅವನ ಹೆಂಡತಿ ವಸುಧಾ ಕೂಡ ಬಹಳ ಒಳ್ಳೆಯ ಶ್ರೀ ಕೃಷ್ಣ ಭಕ್ತೆ. ಎಲ್ಲಾ ಕೆಲಸಕಾರ್ಯಗಳಲ್ಲಿ ಆ ಗೋಪಾಲನನ್ನು ಸ್ಮರಿಸುತ್ತಾ ಕಾಲವನ್ನು ಕಳೆಯುತ್ತಿದ್ದಳು. ಈ ದಂಪತಿಗಲ್ಲಿಬ್ಬರು ಅಕ್ಕ-ಪಕ್ಕದ ಮನೆಯವರಿಗೆ ಬಹಳ ಸಹಾಯಮಾಡುತ್ತಾ ಇದ್ದರು. ಎಲ್ಲರಲ್ಲೂ ಆ ಶ್ರೀ ಕೃಷ್ಣ ಪರಮಾತ್ಮನನ್ನೇ ದರ್ಶಿಸುತ್ತಿದ್ದರು.

ರಂಗದಾಸ - ವಸುಧಾ ದಂಪತಿಗಳ ಮನೆಯಲ್ಲಿ ಸುಂದರ ಶ್ರೀ ಕೃಷ್ಣನ ವಿಗ್ರಹವಿತ್ತು. ಕೈಯಲ್ಲಿ ಕೊಳಲು ಹಿಡಿದುಕೊಂಡಿದ್ದ ಆ ಬಾಲಕೃಷ್ಣನು ಬಹಳ ಮುದ್ದಾಗಿದ್ದನು. ಪ್ರತಿದಿನ ಆ ದೇವರ

ಮುಂದೆ ನಿಂತುಕೊಂಡು ಆ ದಂಪತಿಗಳಿಬ್ಬರೂ ಸುಮಧುರ ಹಾಡುಗಳನ್ನು ಹಾಡುತಿದ್ದರು. ಆ ದೇವರಿಗೆ ಬೆಣ್ಣೆ-ಹಾಲಿನ ಕೆನೆ ನೈವೇದ್ಯವನ್ನು ಇಡುತ್ತಿದ್ದರು. ಪ್ರತಿರಾತ್ರಿ ಬೆಚ್ಚಗಿನ ಹಾಲು ನಿವೇದಿಸಿ ಲಾಲಿಹಾಡುಗಳನ್ನು ಹಾಡುತ್ತಿದ್ದರು.

ಒಂದುದಿನ ರಾತ್ರಿ, ಆ ವಿಧವಾಗಿ ದೇವರಿಗೆ ಒಳ್ಳೆಯ ಲಾಲಿಹಾಡನ್ನು ಹಾಡಿ, ಅವರೂ ಕೂಡಾ ನಿದ್ರಿಸಿದರು. ರಾತ್ರಿ 2 ಗಂಟೆಯ ಸಮಯದಲ್ಲಿ ದೊಡ್ಡ ಶಬ್ದ ಕೇಳಿತು. ಒಬ್ಬ ಕಳ್ಳ ಕೈಯಲ್ಲಿದ್ದ ಈಟಿಯಿಂದ ಹೆಬ್ಬಾಗಿಲನ್ನು ಒಡೆದು ಮನೆ ಒಳಗೆ ಪ್ರವೇಶಿಸಿದನು. ಅವನ ಭೀಕರವಾದ ರೂಪವನ್ನು ನೋಡಿ, ರಂಗದಾಸ -ವಸುಧಾ ದಂಪತಿಗಳಿಗೆ ಬಾಯಲ್ಲಿ ಮಾತು ಹೊರಡಲಿಲ್ಲ. ಬಾಯಿ ತೆರೆದರೆ, ಕೊಲ್ಲುತ್ತೇನೆಂದು ಗಟ್ಟಿಯಾಗಿ ಅರಚಿದನು. ಅವನಿಗೆ ಎರಡು ಕೈಗಳನ್ನು ಜೋಡಿಸಿ, ನಮ್ಮ ಹತ್ತಿರವೇನಿದೆ ತಮ್ಮಾ! ನಾವು ಕಡು ಬಡವರು ಎಂದು ಹೇಳಿದರು.

ಆದರೆ, ಆ ಕಳ್ಳನು ಏನೂ ಕೇಳಿಸಿಕೊಳ್ಳದೇ ಇನ್ನೂ ಗಟ್ಟಿಯಾಗಿ ಅರಚುತ್ತಾ, ಕೂಗುತ್ತಾ, ಏನೂ ಇಲ್ಲವಾದರೆ ನಿಮ್ಮ ಪ್ರಾಣವನ್ನೇ ತೆಗೆಯುತ್ತೇನೆ ಎಂದನು. ರಂಗದಾಸ ದಂಪತಿಗಳು ಗಾಬರಿಯಾದರು. ಕೂಡಲೇ ಗೋವಿಂದಾ ... ಗೋಪಾಲಾ ... ಗೋಕುಲಾನಂದನಾ ... ನೀನೇ ನಮಗೆ ದಿಕ್ಕು ಎಂದು ಭಕ್ತಿಯಿಂದ ಕರೆದರು. ಅಷ್ಟೇ! ಅದ್ಭುತ! ತಾವು ದಿನಾಲು ಪೂಜಿಸುತ್ತಿರುವ ಬಾಲಕೃಷ್ಣನ ವಿಗ್ರಹದ ಪಕ್ಕದಲ್ಲಿರುವ ಕಿಟಕಿಯಿಂದ ದೊಡ್ಡಗಾಳಿ ಬೀಸಿ, ಆ ವಿಗ್ರಹವು ಒಂದೇಸಲ ಕದಲಿ ಆ ಕಳ್ಳನ ಮೇಲೆ ಬಿತ್ತು. ಆಕಸ್ಮಾತ್ತಾಗಿ ಆದ ಈ ಪರಿಣಾಮಕ್ಕೆ ಆ ಕಳ್ಳನು ಮೂರ್ಛೆತಪ್ಪಿ ಬಿದ್ದುಬಿಟ್ಟನು. ಇಷ್ಟರಲ್ಲಿ ಆ ರಂಗದಾಸ ದಂಪತಿಗಳ ಬೊಬ್ಬೆ ಕೇಳಿ ಅಕ್ಕ-ಪಕ್ಕದ ಮನೆಯವರು ಎಚ್ಚೆತ್ತು ಓಡೋಡಿ ಅಲ್ಲಿಗೆ ಬಂದರು. ಕೆಳಗೆ ಬಿದ್ದ ಕಳ್ಳನನ್ನು ನೋಡಿದರು. ಬಾಲಕೃಷ್ಣನ ವಿಗ್ರಹವನ್ನೂ ನೋಡಿದರು. ರಂಗದಾಸ ದಂಪತಿಗಳು ಅವರಿಗೆ ಜರುಗಿದ ವಿಷಯವನ್ನು ಹೇಳಿದರು. ಅಷ್ಟು ಗಾಳಿ ಹೇಗೆ ಬಂತೋ ಆ ವಿಗ್ರಹವು ಅಷ್ಟು ವೇಗವಾಗಿ ಬಿದ್ದರೂ, ಏನೂ ಆಗದೆ ಹಾಗೆಯೇ ಇತ್ತು ಅವರಿಗೆ ಆಶ್ಚರ್ಯ ತೋರಿತು. ಆ ಶ್ರೀ ಕೃಷ್ಣನೇ ತಮ್ಮನ್ನು ಹಾಗೆ ರಕ್ಷಿಸಿದನೆಂದು ಗ್ರಹಿಸಿದರು. ದೇವರ ವಿಗ್ರಹವನ್ನೂ ಭಕ್ತಿಯಿಂದ ತಿರುಗಿ ಆ ಗೂಡಲ್ಲೇ ಇಟ್ಟರು. ಶ್ರೀ ಕೃಷ್ಣನು ರಂಗದಾಸ ದಂಪತಿಗಳನ್ನು ರಕ್ಷಿಸಿದ ವಿಷಯವನ್ನು ತಿಳಿದು ಆ ಊರವರೆಲ್ಲರೂ ಆ ದಂಪತಿಗಳ ಮೇಲೆ ಶ್ರೀ ಕೃಷ್ಣ ಭಗವಂತನು ತೋರಿಸಿದ ಅನುಗ್ರಹಕ್ಕೆ ತುಂಬಾ ಸಂತೋಷಪಟ್ಟರು.

ಶ್ರೀ ಕೃಷ್ಣನು ಭಕ್ತಾಧೀನನು. ಮನಸಾರೆ ಆ ದೇವರನ್ನು ಪೂಜಿಸುವವರನ್ನು ಕಣ್ಣಿನ ರೆಪ್ಪೆಯ ಹಾಗೇ ಕಾಪಾಡುವ ಕರುಣಾಮುರ್ತಿ. ಸೃಷ್ಟಿಯಲ್ಲಿರುವ ದೇವತೆಗಳೆಲ್ಲರೂ ಆ ದೇವರ ಸ್ವರೂಪವೇ! ಯಾರು ಯಾವ ದೇವರನ್ನು ಪೂಜಿಸಿದರೂ ಅವೆಲ್ಲವೂ ಸೇರುವುದು ಆ ಗೋವಿಂದನಿಗೇ! ಆ ಶ್ರೀ ಕೃಷ್ಣ ಭಗವಂತನನ್ನು ಸ್ಮರಿಸುತ್ತಾ ನಮ್ಮ ಜನ್ಮವನ್ನು ಧನ್ಯ ಮಾಡಿಕೊಳ್ಳೋಣ.

ನಾಲ್ಕನೇ ಅಧ್ಯಾಯವು ಸಂಪೂರ್ಣವಾಯಿತು

ಗೋವಿಂದಾ ... ಗೋಪಾಲಾ ... ಗೊಕುಲನಂದನಾ ...

********

## ಐದನೇ ಅಧ್ಯಾಯ
# ಮಾಧವನ ಕಥೆ

ಶ್ರೀ ಕೃಷ್ಣನು ಪರಮದಯಾಸ್ವರೂಪನು. ಆ ದೇವರನ್ನು ನಂಬಿದವರಿಗೆ ಯಾವುದೇ ಆಪತ್ತುಗಳು ಬರುವುದಿಲ್ಲ. ಆ ದೇವರನ್ನು ನಿತ್ಯ ಸ್ಮರಿಸುವವರ ಜೀವನವು ಶುಭಪ್ರದವಾಗಿ ನಡೆಯುತ್ತದೆ. ಗೋಕುಲಾನಂದನನು ಭಕ್ತವತ್ಸಲನು. ಆಶ್ರಿತಜನ ಪಕ್ಷಪಾತಿ. ಆ ದೇವರ ಅನುಗ್ರಹವನ್ನು ಪಡೆಯಲು ಯಾವ ಯಜ್ಞ-ಯಾಗಗಳನ್ನು ಮಾಡುವ ಕೆಲಸವಿಲ್ಲ. ಭಕ್ತಿಯಿಂದ ಒಂದು ಚಿಕ್ಕ ತುಳಸೀದಳವನ್ನು ಸಮರ್ಪಿಸಿದರೂ ಆನಂದಿಸುತ್ತಾನೆ.

ಪೂರ್ವಕಾಲದಲ್ಲಿ ಗೋವಿಂದಪುರಂನಲ್ಲಿ, ಮಾಧವನೆಂಬ ಭಕ್ತನು ಇದ್ದನು. ಅವನಿಗೆ ಆ ಶ್ರೀ ಕೃಷ್ಣ ದೇವರೆಂದರೆ ಬಹಳ ಭಕ್ತಿ. ಆ ಊರಲ್ಲಿ ಒಂದು ಉತ್ತಮ ಶ್ರೀ ಕೃಷ್ಣ ದೇವಾಸ್ಥಾನ ಇದ್ದಿತ್ತು. ದೇವಾಲಯದಲ್ಲಿ ಬಹಳ ಸುಂದರವಾದ ರಾಧಾ ಸಮೇತ ಶ್ರೀ ಕೃಷ್ಣನ ವಿಗ್ರಹವಿತ್ತು. ಆದರೆ, ಆ ದಿನಗಳಲ್ಲಿ ಇದ್ದ ಕಟ್ಟುಪಾಡುಗಳು ಸಂಪ್ರದಾಯದ ಪ್ರಕಾರ ಆ ದೇವಸ್ಥಾನಕ್ಕೆ ಕೆಳಜಾತಿಯವರಿಗೆ ಪ್ರವೇಶ ಇರುತ್ತಿರಲಿಲ್ಲ. ಮಾಧವನು ಕೆಳಗಿನ ಜಾತಿಯವನಾದ್ದರಿಂದ ದೇವಸ್ಥಾನಕ್ಕೆ ಹೋಗಲಾಗಲಿಲ್ಲ. ಆದರೆ, ಯಾವಾಗಲೂ ಆ ರಾಧಾಕೃಷ್ಣರನ್ನ ನೆನೆಯುತ್ತಾ ಕಾಲವನ್ನು ಕಳೆಯುತ್ತಿದ್ದನು.

ಪ್ರತಿದಿನ ದೇವಸ್ಥಾನದ ಹೊರಗೆ ಕುಳಿತುಕೊಂಡು, ದೇವಸ್ಥಾನದ ಗೋಡೆಯ ಮೇಲಿದ್ದ ರಾಧಾಕೃಷ್ಣರ ವಿಗ್ರಹಮೂರ್ತಿಯ ಚಿತ್ರವನ್ನು ನೋಡುತ್ತಾ ಮೈಮರೆಯುತ್ತಿದ್ದನು. ಅವನ ಭಕ್ತಿಯನ್ನು ನೋಡಿ ಎಲ್ಲರೂ ತುಂಬಾ ಆಶ್ಚರ್ಯಪಡುತ್ತಿದ್ದರು. ಅವನನ್ನು ದೇವಸ್ಥಾನದ ಒಳಗೆ ಕರೆದುಕೊಂಡು ಹೋಗಿ ಆ ರಾಧಾಕೃಷ್ಣರ ದರ್ಶನವನ್ನು ಕೊಡಿಸಬೇಕೆಂದು ಕೆಲವರಿಗೆ ಅನಿಸಿದರೂ, ದೇವಸ್ಥಾನದ ಅಧಿಕಾರಿಗಳ ಅನುಮತಿ ಬಾರದೇ ಇದ್ದುದರಿಂದ ಅದು ಸಾಧ್ಯವಾಗಲಿಲ್ಲ. ಅದಕ್ಕೆ ಅವರೆಷ್ಟೋ ನೋಯುತ್ತಿದ್ದರು.

ಹೀಗೆ ದಿನಗಳು ಉರುಳುತ್ತಿರುವಾಗ, ಒಂದುಬಾರಿ ಮಾಧವನಿಗೆ ಯಾವುದೋ ವಿಚಿತ್ರ ಚರ್ಮರೋಗ ತಗುಲಿತು. ಎಷ್ಟೋ ಬಗೆಯ ಮದ್ದುಗಳನ್ನು ಮಾಡಿದರೂ, ಫಲಿತವಿಲ್ಲದೇ ಹೋಯಿತು. ಶರೀರವೆಲ್ಲಾ ತುಂಬಾ ನೋಯುತ್ತಿತ್ತು. ಈ ನೋವಿನಿಂದಾಗಿ ದೇವಸ್ಥಾನದ ಹತ್ತಿರ ಕೂಡಾ ಹೋಗಲಾರದಾದನು. ಮನೆಯಿಂದಲೇ ರಾಧಾಕೃಷ್ಣರನ್ನು ನೆನೆಯುತ್ತಾ ಸ್ಮರಿಸುತ್ತಾ ಕಾಲವನ್ನು ಕಳೆಯುತ್ತಿದ್ದನು. ಈ ರೋಗದಿಂದ ಉಪಶಮನ ಮಾಡೆಂದು ಆ ಗೋಕುಲಾನಂದನನ್ನೇ ಬೇರೆ ಬೇರೆ ರೀತಿಯಿಂದ ಬೇಡಿಕೊಂಡನು.

ಇಷ್ಟರಲ್ಲೇ ಆ ದೇವಸ್ಥಾನದ ವಾರ್ಷಿಕೋತ್ಸವಗಳು ಬಂತು. ಪ್ರತಿವರುಷ ಮೂರುದಿನಗಳಲ್ಲಿ ಜರುಗುವ ವಾರ್ಷಿಕೋತ್ಸವದಲ್ಲಿ ಕೊನೆಯ ದಿನದ ಉತ್ಸವ ಬಹಳ ಅದ್ಭುತವಾಗಿ ಇರುತ್ತಿತ್ತು. ಆ ದೇವರ ಉತ್ಸವಮೂರ್ತಿಗಳನ್ನು, ಗೋವಿಂದಪುರಂನಲ್ಲಿರುವ ಎಲ್ಲಾ ಬೀದಿಗಳಲ್ಲಿ ಪಲ್ಲಕಿಯಲ್ಲಿ ಸಾಗಿಸುತ್ತಿದ್ದರು. ಆ ದಿನ ತುಂಬಾ ಜನಜಂಗುಳಿ ಇರುತ್ತಿತ್ತು. ರಾಧಾಕೃಷ್ಣರ ವಿಗ್ರಹಗಳನ್ನು ಬಹಳ ಸುಂದರವಾಗಿ ಅಲಂಕರಿಸಿ ಸಾಗಿಸುತ್ತಿದ್ದರು. ಆ ವರುಷ ಕೂಡಾ ಮೂರನೇದಿನ ರಾಧಾಕೃಷ್ಣರನ್ನು ಬಹಳ ಅಂದವಾದ ವಸ್ತ್ರಗಳಿಂದ, ಆಭರಣಗಳಿಂದ,

ಒಳ್ಳೆಯ ಹೂ ಮತ್ತು ತುಳಸೀಮಾಲೆಗಳಿಂದ ಅಲಂಕಾರಮಾಡಿ ಪಲ್ಲಕಿಯಲ್ಲಿ ಹೊರಟರು. ಶ್ರೀ ಕೃಷ್ಣನ ತಲೆಯ ಮೇಲೆ ಅದ್ಭುತವಾದ ನವಿಲುಗರಿ ಇತ್ತು.

ಪಲ್ಲಕ್ಕಿಯು ಒಂದೊಂದು ಬೀದಿ ತಿರುಗಿ ಮಾಧವನ ಬೀದಿಗೆ ಬಂತು. ಮಾಧವನು ಮನೆಯಿಂದ ಹೊರಗೆ ಬಂದು ಆ ಪಲ್ಲಕಿಯನ್ನು ಆನಂದದಿಂದ ನೋಡತೊಡಗಿದನು. ರಾಧಾಕೃಷ್ಣರ ದಿವ್ಯ ಸೌಂದರ್ಯಕ್ಕೆ ಬಹಳ ಸಂತೋಷಪಟ್ಟನು. ಇಷ್ಟರಲ್ಲಿ ಒಂದು ಅದ್ಭುತ ಜರುಗಿತು. ರಾಧಾಕೃಷ್ಣರ ಮೂರ್ತಿಗಳು ಮಾಧವನ ಮನೆ ಹತ್ತಿರ ಬಂದಾಗ, ಒಮ್ಮೆಲೇ ಶ್ರೀ ಕೃಷ್ಣನ ತಲೆಯ ಮೇಲಿನ ನವಿಲಗರಿ ಜಾರಿ ಮಾಧವನ ಮೇಲೆ ಬಿತ್ತು. ಆ ಗರಿ ಮಾಧವನ ಶರೀರಕ್ಕೆ ಸ್ಪರ್ಶಿಸಿದಾಗ ಮಾಧವನಿಗೆ ಒಂದುಸಾರಿ ಶರೀರಕ್ಕೆಲ್ಲಾ ವಿದ್ಯುತ್ ಪ್ರವಹಿಸಿ ಹಾಗೆ ಆಯಿತು. ಆ ಕ್ಷಣದಲ್ಲಿ ಚರ್ಮರೋಗ ಮಾಯವಾಯಿತು. ಇದೆಲ್ಲಾ ಆ ಶ್ರೀ ಕೃಷ್ಣನ ಅನುಗ್ರಹವೆಂದು ಗ್ರಹಿಸಿದ ಮಾಧವನ ಕಣ್ಣಲ್ಲಿ ಆನಂದಬಾಷ್ಪಗಳು ಉದುರಿತು.

ಇದನ್ನೆಲ್ಲಾ ಗಮನಿಸಿದ ಭಕ್ತರೂ, ದೇವಸ್ಥಾನದ ಅಧಿಕಾರಿಗಳೂ ಬಹಳ ಆಶ್ಚರ್ಯಪಟ್ಟರು. ಆ ಗೋಕುಲಾನಂದನನಿಗೆ ಮಾಧವನೆಂದರೆ ಬಹಳ ಪ್ರೇಮವೆಂದು ತಿಳಿದರು. ಮಾಧವನ ಕಾಲಿನ ಮೇಲೆ ಬಿದ್ದು ತಮ್ಮನ್ನು ಕ್ಷಮಿಸೆಂದು ಬೇಡಿಕೊಂಡರು. ಮಾಧವನ ಕೊರಳಿಗೆ ಮಾಲೆ ಹಾಕಿ, ಆ ಪಲ್ಲಕ್ಕಿಯೊಟ್ಟಿಗೆ ಸಕಲ ಮರ್ಯಾದೆಗಳಿಂದ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ಆವತ್ತಿನಿಂದ ಆ ದೇವರ ದರ್ಶನಕ್ಕೆ ಇದ್ದ ಎಲ್ಲಾ ನಿಯಮಗಳನ್ನು ತೊಲಗಿಸಿದರು. ಎಲ್ಲಾ ಜಾತಿಯವರಿಗೂ ದೇವಸ್ಥಾನಕ್ಕೆ ಬರಲು ಅವಕಾಶ ಕಲ್ಪಿಸಿಕೊಟ್ಟರು. ಆ ದೇವರ ಅನುಗ್ರಹವನ್ನು ಪಡೆಯಲು ಹುಟ್ಟಿದ ಕುಲದ ಸಂಬಂಧವಿಲ್ಲ ಎಂದು ಎಲ್ಲರೂ ತಿಳಿದರು. ಅಂದಿನಿಂದ ಭಕ್ತರೆಲ್ಲರಿಗೂ ಆ ರಾಧಾಕೃಷ್ಣರ ದರ್ಶನವು ತಡೆಯಿಲ್ಲದೆ ಜರುಗಲು ಶುರುವಾಯಿತು.

ಶ್ರೀ ಕೃಷ್ಣನು ಪ್ರೇಮಸ್ವರೂಪನು. ಆ ಗೋಪಾಲಕೃಷ್ಣನಿಗೆ ತನ್ನ ಭಕ್ತರೆಂದರೆ ತುಂಬಾ ಅನುರಾಗ, ಅಪ್ಯಾಯತೆ. ಕಲಿಯುಗದಲ್ಲಿ ಆ ದೇವರ ಅನುಗ್ರಹವನ್ನು ಹೊಂದಲು, ಈ ಶ್ರೀ ಕೃಷ್ಣ ವ್ರತವನ್ನು ಆಚರಿಸುವುದು ಅತ್ಯಂತ ಸುಲಭ ಮಾರ್ಗ. ಈ ವ್ರತವನ್ನು ನಿತ್ಯ ಆಚರಿಸಿ, ನಾವೆಲ್ಲರೂ ಸುಖ ಶಾಂತಿಯಿಂದ, ಶುಭಪ್ರದವಾಗಿ ನಮ್ಮ ಜೀವನವನ್ನು ಧನ್ಯ ಮಾಡಿಕೊಳ್ಳೋಣ.

ಐದನೇ ಅಧ್ಯಾಯವು ಸಂಪೂರ್ಣವಾಯಿತು
ಗೋವಿಂದಾ ... ಗೋಪಾಲಾ ... ಗೊಕುಲನಂದನಾ ...
ಶ್ರೀ ಕೃಷ್ಣ ವ್ರತವು ಸಂಪೂರ್ಣವಾಯಿತು.
|| ಓಂ ನಮೋ ಭಗವತೇ ವಾಸುದೇವಾಯ ||
|| ಓಂ ತತ್ಸತ್ ||
|| ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು ||

********

## ಶ್ರೀ ಕೃಷ್ಣಾಷ್ಟಕಂ

ವಸುದೇವ ಸುತಂ ದೇವಂ ಕಂಸ ಚಾಣೂರ ಮರ್ದನಮ್ |
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್ || 1 ||
ಅತಸೀ ಪುಷ್ಪ ಸಂಕಾಶಂ ಹಾರ ನೂಪುರ ಶೋಭಿತಮ್ |
ರತ್ನ ಕಂಕಣ ಕೇಯೂರಂ ಕೃಷ್ಣಂ ವಂದೇ ಜಗದ್ಗುರುಮ್ || 2 ||
ಕುಟಿಲಾಲಕ ಸಂಯುಕ್ತಂ ಪೂರ್ಣಚಂದ್ರ ನಿಭಾನನಮ್ |
ವಿಲಸತ್ ಕುಂಡಲಧರಂ ಕೃಷ್ಣಂ ವಂದೇ ಜಗದ್ಗುರಮ್ || 3 ||
ಮಂದಾರ ಗಂಧ ಸಂಯುಕ್ತಂ ಚಾರುಹಾಸಂ ಚತುರ್ಭುಜಮ್ |
ಬರ್ಹಿ ಪಿಂಛಾವ ಚೂಡಾಂಗಂ ಕೃಷ್ಣಂ ವಂದೇ ಜಗದ್ಗುರುಮ್ || 4 ||
ಉತ್ಫುಲ್ಲ ಪದ್ಮಪತ್ರಾಕ್ಷಂ ನೀಲ ಜೀಮೂತ ಸನ್ನಿಭಮ್ |
ಯಾದವಾನಾಂ ಶಿರೋರತ್ನಂ ಕೃಷ್ಣಂ ವಂದೇ ಜಗದ್ಗುರುಮ್ || 5 ||
ರುಕ್ಮಿಣೀ ಕೇಳಿ ಸಂಯುಕ್ತಂ ಪೀತಾಂಬರ ಸುಶೋಭಿತಮ್ |
ಅವಾಪ್ತ ತುಲಸೀ ಗಂಧಂ ಕೃಷ್ಣಂ ವಂದೇ ಜಗದ್ಗುರುಮ್ || 6 ||
ಗೋಪಿಕಾನಾಂ ಕುಚದ್ವಂದ ಕುಂಕುಮಾಂಕಿತ ವಕ್ಷಸಮ್ |
ಶ್ರೀನಿಕೇತಂ ಮಹೇಷ್ವಾಸಂ ಕೃಷ್ಣಂ ವಂದೇ ಜಗದ್ಗುರುಮ್ || 7 ||
ಶ್ರೀವತ್ಸಾಂಕಂ ಮಹೋರಸ್ಕಂ ವನಮಾಲಾ ವಿರಾಜಿತಮ್ |
ಶಂಖಚಕ್ರ ಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಮ್ || 8 ||
ಕೃಷ್ಣಾಷ್ಟಕ ಮಿದಂ ಪುಣ್ಯಂ ಪ್ರಾತರುತ್ಥಾಯ ಯಃ ಪಠೇತ್ |
ಕೋಟಿಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ || 9 ||

********

## ಮಧುರಾಷ್ಟಕಂ

ಅಧರಂ ಮಧುರಂ ವದನಂ ಮಧುರಂ
ನಯನಂ ಮಧುರಂ ಹಸಿತಂ ಮಧುರಮ್ |
ಹೃದಯಂ ಮಧುರಂ ಗಮನಂ ಮಧುರಂ
ಮಧುರಾಧಿಪತೇರಖಿಲಂ ಮಧುರಮ್ || 1 ||
ವಚನಂ ಮಧುರಂ ಚರಿತಂ ಮಧುರಂ
ವಸನಂ ಮಧುರಂ ವಲಿತಂ ಮಧುರಮ್ |
ಚಲಿತಂ ಮಧುರಂ ಭ್ರಮಿತಂ ಮಧುರಂ
ಮಧುರಾಧಿಪತೇರಖಿಲಂ ಮಧುರಮ್ || 2 ||
ವೇಣು-ರ್ಮಧುರೋ ರೇಣು-ರ್ಮಧುರಃ
ಪಾಣಿ-ರ್ಮಧುರಃ ಪಾದೌ ಮಧುರೌ |
ನೃತ್ಯಂ ಮಧುರಂ ಸಖ್ಯಂ ಮಧುರಂ
ಮಧುರಾಧಿಪತೇರಖಿಲಂ ಮಧುರಮ್ || 3 ||
ಗೀತಂ ಮಧುರಂ ಪೀತಂ ಮಧುರಂ
ಭುಕ್ತಂ ಮಧುರಂ ಸುಪ್ತಂ ಮಧುರಮ್ |
ರೂಪಂ ಮಧುರಂ ತಿಲಕಂ ಮಧುರಂ

ಮಧುರಾಧಿಪತೇರಖಿಲಂ ಮಧುರಮ್ || 4 ||
ಕರಣಂ ಮಧುರಂ ತರಣಂ ಮಧುರಂ
ಹರಣಂ ಮಧುರಂ ಸ್ಮರಣಂ ಮಧುರಮ್ |
ವಮಿತಂ ಮಧುರಂ ಶಮಿತಂ ಮಧುರಂ
ಮಧುರಾಧಿಪತೇರಖಿಲಂ ಮಧುರಮ್ || 5 ||
ಗುಂಜಾ ಮಧುರಾ ಮಾಲಾ ಮಧುರಾ
ಯಮುನಾ ಮಧುರಾ ವೀಚೀ ಮಧುರಾ |
ಸಲಿಲಂ ಮಧುರಂ ಕಮಲಂ ಮಧುರಂ
ಮಧುರಾಧಿಪತೇರಖಿಲಂ ಮಧುರಮ್ || 6 ||
ಗೋಪೀ ಮಧುರಾ ಲೀಲಾ ಮಧುರಾ
ಯುಕ್ತಂ ಮಧುರಂ ಮುಕ್ತಂ ಮಧುರಮ್ |
ದೃಷ್ಟಂ ಮಧುರಂ ಶಿಷ್ಟಂ ಮಧುರಂ
ಮಧುರಾಧಿಪತೇರಖಿಲಂ ಮಧುರಮ್ || 7 ||
ಗೋಪಾ ಮಧುರಾ ಗಾವೋ ಮಧುರಾ
ಯಷ್ಟಿರ್ಮಧುರಾ ಸೃಷ್ಟಿರ್ಮಧುರಾ |
ದಲಿತಂ ಮಧುರಂ ಫಲಿತಂ ಮಧುರಂ
ಮಧುರಾಧಿಪತೇ ರಖಿಲಂ ಮಧುರಮ್ || 8 ||
|| ಇತಿ ಶ್ರೀಮದ್ವಲ್ಲಭಾಚಾರ್ಯವಿರಚಿತಂ ಮಧುರಾಷ್ಟಕಂ ಸಂಪೂರ್ಣಮ್ ||

********



ಅಧರಂ ಮಧುರಂ ವದನಂ ಮಧುರಂ
ನಯನಂ ಮಧುರಂ ಹಸಿತಂ ಮಧುರಮ್ |
ಹೃದಯಂ ಮಧುರಂ ಗಮನಂ ಮಧುರಂ
ಮಧುರಾಧಿಪತೇರಖಿಲಂ ಮಧುರಮ್ ||



ವಸುದೇವಸುತಂ ದೇವಂ ಕಂಸಚಾಣೂರ ಮರ್ದನಂ |
ದೇವಕೀ ಪರಮಾನಂದಂ ಕೃಷ್ಣಮ್ ವಂದೇ ಜಗದ್ಗುರುಮ್ ||